ಇವರ ಚಿತ್ರಗಳಿವೆ ಇದರಲ್ಲಿ.

ದೀಪದ ಹೆಜ್ಜೆ

ಜಿ. ಎಸ್. ಶಿವರುದ್ರಪ್ಪ

ಜಿ. ಕೆ. ಅಂಡ್ ಬ್ರದರ್ಸ್
ಬಸವನಗುಡಿ : ಬೆಂಗಳೂರು-೪

ಮೊದಲನೆಯ ಮುದ್ರಣ : ೧೯೫೫

ಬೆಲೆ : ೨-೦೮

ಮುದ್ರಕರು :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಕೃಷ್ಣಮೂರ್ತಿಪುರಂ, ಮೈಸೂರು

ಈ ಕವನಸಂಗ್ರಹದ ಪ್ರಕಟನೆಗೆಂದು ಕವಿತೆಗಳನ್ನು ಆಯ್ದು ಜೋಡಿಸಿದಾಗ, ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ ಬರೆದ ಈ ಪದ್ಯಗಳಲ್ಲಿ ಹಲವು, ಸ್ಥಾಯಿಯಾದ ಚಿಂತನೆಯೊಂದರ ಅಜ್ಞಾತಸೂತ್ರವೊಂದನ್ನು ಒಳಗೊಂಡಂತೆ ತೋರಿತು. ಹಾಗೆಯೇ ಯೋಚಿಸಿ ನೋಡಿದ್ದರಲ್ಲಿ, ಇವುಗಳಲ್ಲಿ ನನಗರಿಯದಂತೆಯೇ ಬದುಕಿನ ಸಮಸ್ಯೆಯ ಎರಡು ಮುಖಗಳ ವಿವೇಚನೆ ನಡೆದಿದೆ ಎನ್ನಿಸಿತು. ಒಂದು, ಮಾನವ ಮತ್ತು ಆತನ ಅಂತರಂಗ; ಮತ್ತೊಂದು, ಮಾನವ ಮತ್ತು ಕಾಲ.

ಜಾಗೃತ ಚೇತನ ಮೊದಲು ಎದುರಿಸಬೇಕಾದದ್ದು ತನ್ನನ್ನು; ತನ್ನ ಅಂತರಂಗದಲ್ಲಿ ಬಂದು ತಾಕಲಾಡುವ ವಿವಿಧ ಭಾವಗಳನ್ನು. ಎಲ್ಲ ಚೇತನಗಳಲ್ಲೂ ಸಾಮಾನ್ಯವಾಗಿ ಈ ಸದಸತ್ತುಗಳ ಪ್ರಶ್ನೆ, ಘರ್ಷಣೆ ಉಂಟಾಗುವುದಾದರೂ, ಈ ಹೋರಾಟ ಅತ್ಯಂತ ತೀವ್ರವಾಗಿ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಪ್ರಬಲವಾದ ಇಚ್ಛೆ ಮೂಡುವುದು ಎಲ್ಲೋ ಕೆಲವರಲ್ಲಿ ಮಾತ್ರ. ಪಂಚಭೂತಗಳ ಪವಾಡದಿಂದ ನಿರ್ಮಿತವಾದ ಸುಂದರವಾದ ಬಹಿರಂಗ ಲೋಕದಲ್ಲಿ ಮೊದಮೊದಲು ಬೆರಗು ಬಣ್ಣಗಳಲ್ಲಿ ಉತ್ಸಾಹದಿಂದ ವಿಹಾರಗೈದ ಚೇತನ ಬಾಳ ಬಂಡೆಯ ಬುಡಕ್ಕೆ ಬಂದು ನಿಂತಾಗ, ತನ್ನ ಅಂತರಂಗ ನಿಸರ್ಗದ ಸೆಳೆತ ರಭಸಗಳನ್ನೂ, ಬಾಳನ್ನು ನಿಷ್ಠುರವಾಗಿ ಕೊನೆಗಾಣಿಸುವ ಕಾಲದ ಲೀಲೆಯನ್ನೂ ಕಂಡು ಬೆರಗಾಗುತ್ತದೆ. ಇಂಥ ತಾಕಲಾಟದ ಸಮಯದಲ್ಲಿ ಅದು ತನ್ನೊಳಗಿನ ಅವ್ಯವಸ್ಥೆಯನ್ನೆ ಕಾಣುತ್ತದೆ. "ಎದೆಯೊಳಸುಳಿಯು ತಳದಾಳಕೆ" ಪಾತಾಳಗರುಡವನ್ನಿಳಿಸಿ ತನ್ನನ್ನು ತಾನೇ 'ಶೋಧನೆ' [ಪು. ೬೩] ಮಾಡಿಕೊಂಡು ಬೆಚ್ಚಿಬೀಳುತ್ತದೆ; ಮಬ್ಬುಗತ್ತಲ ಕೂಪದಿಂದ ಹೊರಗೆ ಹಾರುವ ಹಾರೈಕೆಯಿಂದ ತಳಮಳಗೊಳ್ಳುತ್ತದೆ. [ಪತಿತ : ಪು. ೫೮]. ತನ್ನ ಒಳಗಿನ ಅವ್ಯವಸ್ಥೆಯ ಮೂಲವನ್ನರಿಯಲು ಪ್ರಯತ್ನಿಸುತ್ತದೆ. ಅಷ್ಟು ಹೊತ್ತಿಗೆ ಯಾವುದೋ ಗುರಿ, ಬಾಳಬಂಡಿಯ ನೊಗಕ್ಕೆ ಹೆಗಲುಕೊಟ್ಟ ಈ ಜೀವಕ್ಕೆ ಗೋಚರಿ

ಸುತ್ತದೆ. ಆ ಗುರಿ 'ಬಾಳಬೀದಿಯ ಬದಿಗೆ ಬೆಳ್ಗೊಳದ ಬೆಟ್ಟದಲಿ ಗೊಮ್ಮಟ' ನಾಗಿ [ಹುಟ್ಟದ ಹಬ್ಬ: ಪು. ೧] ಕರೆಯಬಹುದು. ಹೀಗೆ ಕಂಡ ಯಾವುದೋ ಒಂದು ಗುರಿ, ಒಂದು ಆದರ್ಶ ಇದನ್ನು ಸೆಳೆದಾಗ, ಇಂಥ ಒಂದು ನಂಬಿಕೆಯ ಹಾದಿಯಲ್ಲಿ ಬಂದ ತೊಂದರೆಗಳಿಂದ ಅದು ಮೊದ ಮೊದಲು ಚಕಿತವಾಗುತ್ತದೆ; ಅದಕ್ಕಾಗಿ ಹೋರಾಡುತ್ತದೆ; ಆಗಾಗ ಸೋಲುತ್ತದೆ. ಎಷ್ಟೋಸಲ ತಾನು ಒಪ್ಪಿಕೊಂಡ ಧ್ಯೇಯದ ಬಗೆಗೆ ಇಟ್ಟ ನಂಬಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಹಂಬಲವೂ ಇದಕ್ಕೆ ಬರುವುದುಂಟು. ಮೊದಮೊದಲು ಹಿರಿಯ ಧ್ಯೇಯವೊಂದರಿಂದ ಆಕ ರ್ಷಿತವಾಗಿ, ಅದರ ಅನುಸರಣ ಸುಲಭವೆಂದುಕೊಂಡು ಸಹಿ ಹಾಕುತ್ತದೆ; ನಂತರ ಬಂದೊದಗುವ ಕಷ್ಟಪರಂಪರೆಗಳಿಗೆ ಅಂಜಿ ತನ್ನ 'ಕಂಟ್ರಾಕ್ಟ್'ನ್ನು ವಜಾ ಮಾಡಿಸಲು ಹೆಣಗಾಡುತ್ತದೆ. ಆದರೆ ಒಂದು ಸಲ ನಿಜವಾಗಿಯೂ ಹಿರಿಯದಾದುದೊಂದಕ್ಕೆ ಶರಣಾದರೆ ಮುಗಿಯಿತು; ನಾವು ಬಿಟ್ಟೆವೆಂದು ಕೊಂಡರೂ ಅದು ನಮ್ಮನ್ನು ಬಿಡದು. ಹೀಗಾಗಿ ಹಾದಿ ನಡೆವ ಚೇತನ 'ಹಳೆಯ ಕೊಳಗಳ ಪಾಚಿ'ಯನ್ನು ತಳ್ಳುತ್ತಲೇ 'ಕರುಣಾಳು ಬಾ ಬೆಳಕೆ' ಎಂದು ಕರೆಯುತ್ತಾ ಹೋಗುತ್ತದೆ. [ಪ್ರಶ್ನೆ: ಪು. ೫೩]. ಇದೇ ಸಂದರ್ಭ ದಲ್ಲಿ ತಾನು ತನ್ನೊಡನೆ ಹೂಡಿದ ಹೋರಾಟದಲ್ಲಿ ಎದ್ದು ಬಿದ್ದು, ಕಡೆಗೆ ಇವುಗಳ ಸಹವಾಸವೇ ಬೇಡ ಎಂಬ ನಿರ್ವೇಗದಲ್ಲಿ ನಿಂತಾಗ ಗೊತ್ತಾಗು ತ್ತದೆ, ತಾನು ಯಾರನ್ನು ಶತ್ರುಗಳೆಂದು ತಿಳಿದು ಹೋರಾಡಿದೆನೋ ಅವು ತನ್ನ ಮಿತ್ರರು ಕೂಡಾ ಹೌದೆಂದು. [ನಿರ್ಧಾರ: ಪು. ೬೦]. ಈ ಹೋರಾ ಟದ ಹಾದಿಯಲ್ಲಿ ಸದಾ ಜಯವೇ ದೊರೆಯುತ್ತದೆಂದು ಹೇಳಲಾಗುವುದಿಲ್ಲ. ಏಕೆಂದರೆ ಎಷ್ಟೋ ವೇಳೆ ನಮ್ಮ ಶ್ರದ್ಧೆ ನಿಜವಾದ ಶ್ರದ್ಧೆಯಾಗಿರುವುದಿಲ್ಲ. ಎಲ್ಲರ ಬದುಕಿನಲ್ಲೂ ಅವರವರ ಶ್ರದ್ಧೆಯನ್ನು ಪರೀಕ್ಷಿಸುವ ಸಮಯವೊಂದು ಬಂದೇ ಬರುತ್ತದೆ. ಆಗ ಗೊತ್ತಾಗುತ್ತದೆ ನಮ್ಮ ಶ್ರದ್ಧೆ ನಿಜವಾಗಿಯೂ ಕಾಗಕ್ಕನ ಸಗಣಿ ಮನೆಯೋ, ಅಥವಾ ಗುಬ್ಬಕ್ಕನ ಕಲ್ಲಿನ ಮನೆಯೋ— ಎಂಬುದು. ಅಂಥದೊಂದು ಜಡಿಮಳೆಯ ಇರುಳು ಬಂದಾಗಲೇ ನಮ್ಮ ಶ್ರದ್ಧೆಯ ಹುರುಳು ಗೋಚರಿಸುವುದು. [ಜಡಿಮಳೆಯ ಇರುಳಿನಡಿ: ಪು. ೫೬]. ಅವರವರ ನಂಬಿಕೆಯಲ್ಲಿ ಸಾಕಷ್ಟು ಶಕ್ತಿ ಇತ್ತೋ, ಬೆಳಕನ್ನು

ಮುಡಿಯಲ್ಲಿ ಹೊತ್ತ ಲಾಂದ್ರದ ಹಾಗೆ ನಿಲ್ಲಬಲ್ಲರು ; [ಇವನು : ಪು. ೧೭] ಎಂಥ ಸಂದರ್ಭದಲ್ಲೂ ಎದೆಗುಂದದೆ ಬದುಕಿ ಗಾಂಧಿಯಂತೆ ಸಿಡಿಗುಂಡಿಗೆ ಗಂಡೆದೆಯನ್ನು ಒಡ್ಡಬಲ್ಲರು ; [ಕಂಡದ್ದು ಮೂರು ಸಲ : ಪು. ೪೩] 'ನೆಲವೆ ನನ್ನ ವಾಹನ' ಎಂಬ ಕೆಚ್ಚನ್ನು ಬೆಳೆಯಿಸಿಕೊಳ್ಳಬಲ್ಲರು ; [ಸ್ಪೂಟ್ನಿಕ್-ವಿನೋಬಾ : ಪು. ೬೭] ರಾಗ ಭೋಗಗಳ ಭೋಗಿಯಪ್ಪುಗೆಯಿಂದ ಪಾರಾಗಿ ಅಕ್ಕಮಹಾದೇವಿಯಂತೆ 'ಶ್ರೀ ಶೈಲಜೂಟದಲಿ ಚಂದ್ರಬಿಂಬ' ವಾಗಬಲ್ಲರು. [ಅಮೃತ ಮುಹೂರ್ತ : ಪು. ೬೪]. ಶಿವಾಭಿಮುಖವಾಗಿ ಹೊರಡುವ ಒಂದು ನಿರ್ಧಾರವನ್ನು ಕೈಕೊಂಡ ಸಾಧಕರ ಪಾಲಿಗೆ, ಈ ನಿರ್ಧಾರದ ಘಳಿಗೆಯೇ ಅಮೃತ ಮುಹೂರ್ತವಾಗುತ್ತದೆ. ಇಂಥವರು ದೀಪದ ಹೆಜ್ಜೆಯನ್ನು ಮೂಡಿಸುತ್ತಾ ಮುಂದೆ ಹೋಗುತ್ತಾರೆ. ಕಾಲವನ್ನು ಗೆಲ್ಲುತ್ತಾರೆ; ಗೆದ್ದು ನಿಲ್ಲುತ್ತಾರೆ ; ಮೃತ್ಯುಂಜಯರಾಗುತ್ತಾರೆ.

ತನ್ನನ್ನು ತಾನು ಗೆಲ್ಲುವುದು ಎಂದರೆ ಕಾಲವನ್ನು ಗೆಲ್ಲುವುದು ಎಂದಂತಾಯಿತು. ಹೌದು, ಮನುಷ್ಯನ ನಿರಂತರ ಪ್ರಯತ್ನವೆಲ್ಲಾ ಇದಕ್ಕಾಗಿಯೇ ; ಕಾಲವನ್ನು ಗೆಲ್ಲುವುದಕ್ಕಾಗಿಯೇ, ಅಥವಾ ಕಾಲದ ಸೆರೆಯಿಂದ ಬಿಡಿಸಿಕೊಳ್ಳುವುದಕ್ಕಾಗಿಯೇ. ಈ ಬಯಕೆಯೇ ಸೃಷ್ಟಿಸಿತು ಸ್ವರ್ಗಲೋಕವನ್ನು, ನಿರ್ಜರರಾದ ಅಮರರ ಕಲ್ಪನೆಯನ್ನು, ಕ್ಷೀರಸಾಗರ ಮಂಥನದಿಂದ ಅಮೃತವನ್ನು ಪಡೆದವರ ಕಥೆಯನ್ನು. ಪುರಾಣಗಳಲ್ಲಿ ಬರುವ ಯಯಾತಿಯ ಕತೆ, ಕಳೆದುಹೋದ ಯೌವನವನ್ನು ಮತ್ತೆ ಪಡೆಯಬೇಕೆಂಬ ಮಾನವನ ಬಯಕೆಯ ಪ್ರತೀಕವಾಗಿದೆ. ಹಿಂದೆ ಯಯಾತಿಗೆ ಬಂದ ಭಯ, ಬಯಕೆ, ಎಲ್ಲರಿಗೂ ಬರುವುದುಂಟು. ಆಧುನಿಕ ನಾಗರಿಕತೆಯಂತೂ ಮಾನವನ ಯೌವನದ ಸಂರಕ್ಷಣೆಗಾಗಿ ಎಷ್ಟೊಂದು ಉಪಾಯಗಳನ್ನು ಕಂಡು ಹಿಡಿದಿದೆ! ಜನ ಬಳಸುವ ಪ್ರಸಾದನ ಸಾಧನಗಳು, ಲೇಹ್ಯಗಳು, ಮಾತ್ರೆಗಳು, ಲೇಪನಗಳು—ಇವೆಲ್ಲಾ ಮಾನವ ಕಳೆದುಹೋಗುತ್ತಿರುವ ತನ್ನ ಆಯುಷ್ಯವನ್ನು ಅಥವಾ ಕಾಲವನ್ನು ಹಿಂದೆ ಹಾಕಲು ನಡೆಯಿಸುತ್ತಿರುವ ಭಯಮೂಲವಾದ ದುರ್ಬಲ ಪ್ರಯತ್ನಗಳಲ್ಲದೆ ಮತ್ತೇನು? ಕಾಲಗರ್ಭದ ಅಗಸ್ತ್ಯಜೀರ್ಣಾಗ್ನಿಯಲ್ಲಿ ಎಷ್ಟೋ ಯುಗಯುಗಗಳ ನಾಗರಿಕತೆ ಸಂಸ್ಕೃತಿಗಳು ಅರಗಿಹೋಗಿವೆ; 'ಪ್ರಾಚ್ಯ

ಸಂಶೋಧಕರ ಗುದ್ದಲಿಯ ಸದ್ದು' ಮಾನವನ ಕಿವಿಯ ಮೇಲೆ ಬೀಳುತ್ತದೆ. ದಿನವೂ ನೂರಾರು ಜನ ಈ ಅನಿವಾರ್ಯವಾದ ಕಾಲಕ್ಕೆ ವಶರಾಗುತ್ತಿದ್ದಾರೆ. ಕ್ಷಣ ಕ್ಷಣವೂ ನಮ್ಮನ್ನು ಹಳಬರನ್ನಾಗಿ ಮಾಡುತ್ತಾ ಗೋರಿಯ ದಾರಿಯಲ್ಲಿ ಎಳೆದೊಯ್ಯುವ ಈ ನಿಷ್ಕರುಣ ಕಾಲದ ಹಿಡಿತ ತನಗೂ ತಪ್ಪಿದ್ದಲ್ಲ ಎಂಬ ಸತ್ಯ ಇವನಿಗೆ ಅರಿವಾಗುತ್ತದೆ. ವಯಸ್ಸಾದಂತೆ ಒಂದೊಂದೇ ಮೈಲಿ ಕಲ್ಲುಗಳನ್ನು ಎಣಿಸುತ್ತಾ ನಡೆಯುವ ಇವನಿಗೆ 'ಮಹಡಿ ಮೆಟ್ಟಿಲ ಮೇಲೆ ಯಾರ್ಯಾರದೋ ಹೆಜ್ಜೆ'ಯ ಸದ್ದು [ಮಬ್ಬಿನಿಂದ ಮಬ್ಬಿಗೆ : ಪು. ೪೯] ಕೇಳಿಸುತ್ತದೆ. ಗಡಿಯಾರದ ಟಿಕ್ ಟಿಕ್ ದನಿ ಬಾಳಿನ ನೂಲನ್ನು ಚಣಚಣವೂ ಕತ್ತರಿಸುವ ಕಾಲದ ಕತ್ತರಿಯ ಸದ್ದಿನಂತೆ ಕೇಳುತ್ತದೆ. ಗಡಿಯಾರದಡಿಯಲ್ಲಿ ಬೋಳು ಮರಗಳ ರಸ್ತೆಯಲ್ಲಿ ನಡೆಯುವ ಈ ವ್ಯಕ್ತಿಗೆ ಒಂದು ದಿನ ಗೋಚರಿಸುತ್ತದೆ, ತನ್ನ ಪುಟ್ಟ ಮೊಮ್ಮಗನ ಮುಖದಲ್ಲಿ ಕಳೆದ ತನ್ನ ಎಳೆಯ ಬಿಂಬ! ಆಗ ಎನಿಸುತ್ತದೆ, ತಾನು ಈ ಕಾಲಕ್ಕೆ ಭಯಪಡಬೇಕಾಗಿಲ್ಲ, ತಾನೇ ಈ ಮೊಮ್ಮಗುವಿನಲ್ಲಿ ಮುಂದುವರಿಯುತಿದ್ದೇನೆ ಎಂದು. [ಗಡಿಯಾರದಡಿಯಲ್ಲಿ : ಪು. ೩೮]. ಇನ್ನು ಕೆಲವರುಂಟು ; ಅವರು ತಾವು ಬದುಕಿದ್ದು ಇನ್ನು ಸಾಕು, ಸದ್ಯ ಈ ಕತೆ ಮುಗಿದರೆ ಸಾಕು ಎನ್ನುವ ತೃಪ್ತರು. ಅವರಂಥ ಮುಗ್ಧ ಜನಕ್ಕೆ ಕಾಲವನ್ನು ಕುರಿತ ತಳಮಳ ಅಷ್ಟಾಗಿ ಇಲ್ಲ ; ಹೇಗೂ ಬದುಕಿದ್ದಾಯಿತು, ಬದುಕು ಹಣ್ಣಾಯಿತು, ಮಣ್ಣು ಆಗುವುದು ಇದಕ್ಕೆ ಅನಿವಾರ್ಯ ಎಂಬುದನ್ನು ಒಪ್ಪಿಕೊಂಡವರು. ಅವರೇ ಕಾಲವನ್ನು ಆಹ್ವಾನಿಸುತ್ತಾರೆ 'ಸಾಕು ಮಾಡೋ ಜನ್ಮ' ಎಂದು. [ಬಿಡುಗಡೆ : ಪು. ೨೦]. ಹೀಗೆ ಬದುಕನ್ನು ಕಬಳಿಸುವ ಕಾಲವನ್ನು ಕಂಡು ಭಯಪಡಬೇಕಾಗಿಲ್ಲ, ತಾನಳಿದರೂ ತನ್ನ ಸಂತಾನದಲ್ಲಿ ತಾನುಳಿಯುತ್ತಿದ್ದೇನೆಂಬ ಸಮಾಧಾನವಾಗಲೀ, ಬದುಕಿದ್ದು ಇನ್ನು ಸಾಕೆಂದು ಕಡೆಗೆ ಕಾಲವನ್ನೆ ಆಹ್ವಾನಿಸುವ ಧೈರ್ಯವಾಗಲೀ ಇಲ್ಲದೆ, ಕಾಲವನ್ನು ಗೆದ್ದು ಮೃತ್ಯುಂಜಯರಾದ ವ್ಯಕ್ತಿಗಳು ಕಾಲದ ಕತ್ತಲೆಯ ಮೇಲೆ ಮೂಡಿಸಿದ ದೀಪದ ಹೆಜ್ಜೆಗಳನ್ನೂ ಕಾಣದೆ, ಬರೀ ತಳಮಳದಲ್ಲೇ ಕಾಲ ಕಳೆಯುವವರೂ ಉಂಟು. ಅಂಥವರ ಪಾಲಿಗೆ ಜೀವನವೊಂದು 'ಅರೆ ಮುಗಿದ ಕವನ'ವಾಗಬಹುದು ; ಅವರ ದಾರಿ ಮುಗಿವಿರದ

ಪ್ರಶ್ನೆಯ 'ಸಂಜೆ ದಾರಿ' [ಪು. ೩೫] ಯಾಗಬಹುದು; ಬದುಕೆಲ್ಲಾ 'ಮಬ್ಬಿನಿಂದ ಮಬ್ಬಿಗೆ' [ಪು. ೪೯] ನಡೆದ ಪಯಣವಾಗಬಹುದು. ಹೀಗಾಗಬಾರದು ಬದುಕು. ಅದಕ್ಕೊಂದು ನಂಬುಗೆ ಬೇಕು; ಆ ನಂಬುಗೆ ಯಲ್ಲಿ ಸತ್ವವಿರಬೇಕು; ಹಾಗಾದರೇ ಬದುಕು ಸಾರ್ಥಕವಾದೀತು.

ಈ ಬಗೆಯ ಚಿಂತನೆಯ ಎಳೆಗಳು ಇಲ್ಲಿನ ಹಲವು ಕವನಗಳಲ್ಲಿ ಹಾಸು ಹೊಕ್ಕಾಗಿರುವಂತೆ ತೋರುತ್ತದೆ. ಈ ನನ್ನ ವಿವರಣೆ ಓದುಗರಿಗೆ ಒಂದು ರೀತಿಯಲ್ಲಿ ದಿಕ್ಸೂಚಿಯಾಗಬಹುದೇನೋ ಎಂದು ನನ್ನ ನಿರೀಕ್ಷೆ.

ಕವನ ಸಂಗ್ರಹಗಳನ್ನು ಅಚ್ಚುಹಾಕಲು ಯಾರೂ ಹಿಂಜರಿಯ ಬೇಕಾದಂಥ ಇಂದಿನ ಪರಿಸ್ಥಿತಿಯಲ್ಲಿ, ಬೆಂಗಳೂರಿನ 'ಜಿ. ಕೆ. ಅಂಡ್ ಬ್ರದರ್ಸ್' ಪ್ರಕಾಶನ ಸಂಸ್ಥೆಯ ಒಡೆಯರಾದ ಶ್ರೀ ಜಿ. ಕಲ್ಲಯ್ಯನವರು ವಿಶ್ವಾಸವಿಟ್ಟು ಮುಂದೆ ಬಂದು ಈ ಸಂಗ್ರಹವನ್ನು ತಂದಿದ್ದಾರೆ; ಮೈಸೂ ರಿನ ಶಕ್ತಿ ಪ್ರೆಸ್ಸಿನ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿಯವರು ಇದನ್ನು ಅಂದವಾಗಿ ಮುದ್ರಿಸಿ ಕೊಟ್ಟಿದ್ದಾರೆ; ಈ ಸಂಗ್ರಹದ ಮುದ್ರಣ ಸಾಧ್ಯ ವಾದಷ್ಟು ನಿರ್ದೋಷವಾಗಿರುವಂತೆ ಮಾಡುವ ಪ್ರಯತ್ನದಲ್ಲಿ ಗೆಳೆಯ ಶ್ರೀ ಪ್ರಭುಶಂಕರರು ಸಹಕರಿಸಿದ್ದಾರೆ; ಈ ಪುಸ್ತಕದ ಅಂತರಂಗಕ್ಕೊಂದು ಬಹಿರಂಗ ಸಾಂಕೇತಿಕ ಚಿತ್ರಮುಖವನ್ನು ಗೆಳೆಯ ಪ್ರಭುಪ್ರಸಾದರು ರೂಪಿಸಿ ಪುಸ್ತಕದ ಸೊಗಸನ್ನು ಹೆಚ್ಚಿಸಿದ್ದಾರೆ. ಈ ಎಲ್ಲರ ಸ್ನೇಹ-ವಿಶ್ವಾಸ ಗಳಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಮೈಸೂರು
೨-೧೦-೧೯೫೯

ಜಿ. ಎಸ್. ಶಿವರುದ್ರಪ್ಪ

ಪರಿವಿಡಿ

ಹುಟ್ಟಿದ ಹಬ್ಬ

ನಾ ಬಂದೆ—
ಮೊದಲ ಸ್ಪಂದನದಿಂದೆ,
ಅಂದಿನಿಂದಿಂದಿಗೂ ಸಾಕ್ಷಿಯೊಲು ನಿಂದೆ!

ಲಕ್ಷ ನಕ್ಷತ್ರ ನೀಹಾರಿಕಾ ನಭದ
ರಾಸಲೀಲೆಯೊಳಿದ್ದೆ;
ಒಮ್ಮೆ, ಓ ಅಂದೊಮ್ಮೆ
ಗ್ರಹದ ಘರ್ಷಣೆಯಾಯ್ತು,
ಹುಡಿಯೊಂದು ಬಿತ್ತು.

ಗಿರಗಿರನೆ ತಿರುಗಿತ್ತು ಅಗ್ನಿ ಗೋಳದ ಬುಗುರಿ:
ಶೂನ್ಯಸಿಂಹಾಸನದಿ ಜ್ಯೋತಿಲಿಂಗ!
ಜಡೆಯ ಜ್ವಾಲೆಗೆ ಬೆದರ್ರಿ ಮತ್ತೊಮ್ಮೆ ಸ್ಪಂದಿಸಿತು —
ಈ ವಿಶ್ವರಂಗ!

ಯುಗಯುಗವನೊಂದೊಂದೆ ಬೊಗಸೆಯಲಿ ಮುಕ್ಕಳಿಸಿ
ಸಾಗಿತ್ತು ನಟರಾಜನಗ್ನಿನೃತ್ಯ!
ಉರಿಯ ಹೆಗ್ಗಡಲಲೆಯ ಕೋವರನ ಚಕ್ರದಲಿ
ರೂಪುಗೊಳ್ಳುತಲಿತ್ತು ಈ ಲೋಕಸತ್ಯ!
ಆದಿಕವಿ ಚಿತ್ತದಲಿ ನವಕಾವ್ಯದುದಯಕ್ಕೆ
ನಡೆಯುತಿತ್ತನಂತ ರಸಘರ್ಷಣ!
ಕಾಲಲಬ್ಧಿಗೆ ಕಾದು ಬಿಡುಗಡೆಯ ಬಯಸಿತ್ತು
ಪ್ರಾಣ ಭ್ರೂಣ!

ಇಲ್ಲಿ ನಿಂತನು ಕೆಳಗೆ ಋಷಿ ಭಗೀರಥದೇವ
ವ್ಯೋಮಕೇಶನ ಪಾದಮೂಲದಲ್ಲಿ:
" ಇಳಿದು ಬಾ ತಾಯಿ ಇಳಿದು ಬಾ."

ಓಂ! ಇಳಿದು ಬಂದಳು ತಾಯಿ ಆದಿಶಕ್ತಿ
ರಸಾಗ್ನಿಗ್ರಾಗಿತ್ತು ಭಾವಮುಕ್ತಿ!
ನಕ್ಕು ತಲೆದೂಗಿದವು ಖಗ ಮಿಗ ಹಸಿರು ಹೂ ಹಣ್ಣು
ಗುಡ್ಡ ಬೆಟ್ಟ,
ಬೆಳೆದು ನಿಂತವು ಎಲ್ಲ ಒಂದೊಂದು ಮಟ್ಟ;
ನಾ ಬಂದೆ, ಎಲ್ಲ ಪರಿಣಾಮಗಳ ಜೊತೆಗೆ ಹರಿದು
ಒಳಗೆ ಬೆರೆದು!

ಕತ್ತಲೆಯೆ ಬೆಳಕಾಯ್ತೊ
ಬೆಳಕೆ ಕತ್ತಲೆಯಾಯ್ತೊ,
ಬೆಳಕು ಕತ್ತಲ ಕದನ ಮೊದಲಾಯಿತು.
ಜೀವ ಜೀವನ ನೂರು ಹುಟ್ಟುಸಾವಿನ ಪಗಡೆ
ಸಾಗುತಿತ್ತು.

* * * *

ನಾ ಬಂದೆ,
ಮೊದಲ ಸ್ಪಂದನದಿಂದೆ;
ಅಂದಿನಿಂದಿಂದಿಗೂ ಕಣ್ಣಾಗಿ ನಿಂದೆ!

ಇರವಿನಾಳವ ಕಡೆದು ಅರಿವ ಪಡೆದರು ಅವರು
ಆರ್ಯಕುಲಸಾಧಕರು ಮನುಮುನಿಗಳು.
"ಏಕಂ ಸತ್ ವಿಪ್ರಾ ಬಹುಧಾ ವದಂತಿ"
ಮಂತ್ರ ಹೊಮ್ಮಿತು ಮಿಡಿದು ವಿಶ್ವವೀಣೆಯ ತಂತಿ!
ಒಡನೆಯೇ—
ಒಳಗೆ ಮಲಗಿದ ಗರುಡ ಗರಿಗೆದರಿ ಬಂದ,
ಮುಗಿಲಿನಗಲದ ಗರಿಯ ಬೀಸಾಟದಿಂದ
ಕಾಡುಮೇಡಿಗೆ ದನಕೆ
ಮಿಗಕೆ ಹಕ್ಕಿಗೆ ಜನಕೆ
ಕಳಚಿತ್ತು ಬಂಧ!

ಅವತಾರ ಅವತಾರ, ಲೆಕ್ಕವಿಲ್ಲದ ನೂರು
ಅವತಾರ ಬಂತು ;
ತನ್ನ ತಾನೇ ಸೃಜಿಸಿ ತನ್ನ ತಾನೇ ಕೊಲುವ
ಲೀಲೆಗಳ ಮಣಿಯೊಳಗೆ ಉದ್ಧಾರ ತಂತು !

ನಾ ಬಂದೆ,
ಆ ಎಲ್ಲ ಕತೆಗಳನು ನಾ ಹೊತ್ತು ತಂದೆ
ಕೂರ್ಗಣೆಯ ಸುಯ್ಲುಗಳ ಕೇಳುತ್ತ ಬಂದೆ
ಇಂದು ಸಿಡಿಗುಂಡುಗಳ ಹೊಗೆಯೊಳಗೆ ನಿಂದೆ
ರಾಮ-ರಾವಣರನ್ನು ನಾ ಕರೆದು ತಂದೆ.

* * * *

ನನಗೆ ಹುಟ್ಟಿದ ಹಬ್ಬ !
ನನಗೆಷ್ಟು ವರುಷ ?
" ನಾ ತೊಟ್ಟ ದೇಹಗಳ ಲೆಕ್ಕ
ಇಡುವರಾ ಸೊಕ್ಕ
ಯಮಾ ನೋಡಿ ನಕ್ಕ "
ಆದರೂ ಸುರಿದಿತ್ತು ಹರಕೆಗಳ ವರುಷ !

* * * *

ಬಂದ ಕರು ಬೆರಗುಗಣ್ಣನು ತೆರೆಯೆ,
ಮೇಲಿತ್ತು ನೊಗದ ನೇಣು !
ಎಲ್ಲಿ ಹೋಯಿತೊ ಏನೊ, ಮೊಲೆಯನುಣಿಸುವೆನೆಂದು
ಕನಸಿನಲಿ ನಚ್ಚಿತ್ತ ಕಾಮಧೇನು !
ಎತ್ತ ನೋಡಿದರೂನು, ಉರಿಯ ಕರೆಯುವ ಬಾನು,
ದಣಿದ ನಾಲಗೆಗಿಲ್ಲ ತೊಟ್ಟು ಜೇನು.
ನೊಗದ ಭಾರಕೆ ಬಾಗಿ ಕತ್ತು ಉಳುಕಿದರೇನು
ಬಾಳ ಬಂಡಿಯ ಮುಂದೆ ಎಳೆಯೊ ನೀನು.

ಇಂದು ಹುಟ್ಟಿದ ಹಬ್ಬ—ಗೆಳೆಯರೆಲ್ಲರ ಹರಕೆ
ಮನದ ಬಾಗಿಲಿಗಾಯ್ತು ಹೊಸ ತೋರಣ!
(ಇಂದುವರೆಗೇನಿಲ್ಲ; ಆದರೂ ಮುಂದೆಲ್ಲ)
ಒಳ್ಳಿತಾಗಲಿ ಎನುವ ಆಶ್ವಾಸನ!

*   *   *   *

ನಾ ಬಂದೆ,
ಮೊದಲ ಸ್ಪಂದನದಿಂದೆ—
ಮುಂದೇನು ಎಂದೆ!
ಬಾಳ ಬೀದಿಯ ಬದಿಗೆ ಬೆಳ್ಗೊಳದ ಬೆಟ್ಟದಲಿ
ಗೊಮ್ಮಟನ ಕಂಡೆ;
ಮುಗಿಲಗಲದೆದೆಯಲ್ಲಿ ಚಿಕ್ಕೆಗಳ ದಂಡೆ!
ಚಂದ್ರಹಾಸದ ಮುಂದೆ
ಹಣತೆಯೊಲು ನಿಂದೆ!

ನೆರಳಿಲ್ಲದ ದಾರಿ

ಇದು ನೆರಳಿಲ್ಲದ ದಾರಿ—
ನೀಲಿಯ ನಿರ್ಭಾವದ ಬಾನೋ
ಬಿರು ಬಿಸಿಲಿನ ಗೋರಿ
ಸುಮ್ಮನೆ ಬಿದ್ದಿದೆ ದಾರಿ
ಬಟ್ಟಂಬಯಲೊಳು ಜಾರಿ !

ಇದು ನೆರಳಿಲ್ಲದ ದಾರಿ—
ತಲೆಗೆದರಿದ ಛಾವಣಿ ; ಎಲುಬಿನ ತಡಿಕೆ ;
ತೂತಾಗಿಹ ಕಣ್ಗೂಡಿನ ಕಿಟಕಿಯ ಮನೆ ಹಲವು.
ಭುಸುಗುಡುತಿದೆ ಹುತ್ತ ಹುತ್ತದೊಳು
ನಿಟ್ಟುಸಿರಿನ ಹಾವು !

ಇದು ನೆರಳಿಲ್ಲದ ದಾರಿ—
ಕಲ್‌ಚರಲಿನ ನೆಲ ; ಪಾಳ್ ಬಿದ್ದಿವೆ ಹೊಲ ;
ಹಸುರಿನ ಉಸಿರೇ ಇಲ್ಲ.
ಆದರು ಈ ಬರಡೆದೆಯನು ಕೆರೆದೂ ಕೆರೆದೂ
ಮೈಬೆವರನು ಸುರಿದೂ ಸುರಿದೂ
ಈ ಕೃಪಣೆಯ ಕಲ್ಲೆದೆಯನು ಕರಗಿಸಿ
ಹಸುರನೆತ್ತಬೇಕು ಈ ಎಲುಬಿನ ಯಾತಗಳು !

ಈ ಸುಂದರಿ ವಸುಂಧರೆ ಮಾತಾಯಿ,
ಹೇಗೋ ಕರುಣಿಸಿದರೆ ಉಂಟು.
ಇಲ್ಲ—ಇದ್ದೇ ಇದೆ ಹೊಟ್ಟೆಗು ಬೆನ್ನಿಗು
ನಂಟು.

ಇದು ನೆರಳಿಲ್ಲದ ದಾರಿ—
ಮರವೇ, ಗಿಡವೇ, ಕಾಣಬಹುದೆ ಒಂದಾದರು
ನೆರಳಿನ ತೇಪೆ ?
ನೆಲವೋ ಬಣ್ಣ ಬಣ್ಣಗಳ ಮಣ್ಣಿನ ಚಾಪೆ.

ಎಲ್ಲೋ ಹೇಗೋ ಒಂದಾದರು ಮರ ಕಣ್ಣಿಗೆ ಬಿತ್ತೋ,
ಅದು ಕೂಡಾ ವಿಕೃತಿಯ ನಿಷ್ಕರುಣೆಯ ರೂಪೇ!

ಇದು ನೆರಳಿಲ್ಲದ ದಾರಿ—
ನೀಲಿಯ ನಿರ್ಭಾವದ ಬಾನೋ
ಬಿರು ಬಿಸಿಲಿನ ಗೋರಿ.
ಕನವರಿಸಿದೆ ನಿಟ್ಟುಸಿರಿನ ದಾರಿ:
'ಬಂದೀತೆಂದಿಗೆ ಈ ಕಡೆಗೆ
ಗಂಗೆಯ ಮೆರವಣಿಗೆ.'

ಪ್ರಶ್ನೆ—ಉತ್ತರ

ತಣ್ಣಗೆ ಕೊರೆವ ಬೀದಿ, ಬಿದ್ದಿಹುದು ಉದ್ದಕೂ ಕಪ್ಪಾಗಿ,
ಸಾಲು ದೀಪದ ಬೆಳಕು ಬೆನ್ನ ಸವರಿರಲಾಗಿ
ಮೂಕವಾಗಿ!

ಮಾತು—ಎಲ್ಲೋ ದೂರದಲಿ ಒಡೆದ ಬೂದಿಯ ಮುಗಿಲ
ಬಿರುಕು ತುಟಿಯೊಳಗೆರಡು ಗೊಣಗು ಚಿಕ್ಕೆ!
ದಿಬ್ಬಣಕೆ ಬಂದು ನಿಂತಿವೆ ಇಲ್ಲಿ,
ಬಯಲ ಗುಡಿಸುತ ನಿಂತ ಪೊರಕೆ ಮರಗಳ ಸಾಲು.
ಸುಮ್ಮನೆಯೆ ಸುರಿಯುತಿದೆ ತುಂಬುದಿಂಗಳ ಹಾಲು!

ಇಲ್ಲಿ ಬಿದ್ದಿವೆ—
ಕಾಲು ದಾರಿಯ ಮೇಲೆ ರಾಶಿರಾಶಿಯ ತರಗು.
ಉದುರಿದೆಲೆಗಳ ಕೆದರಿ ಮೂಸುತಿದೆ ಬಿಳಿ ಮಂಜು
ಕೊರೆವ ಮೂಗನು ಚಾಚಿ!

ಅಯ್ಯೊ ಏನನ್ಯಾಯ—
ದಿನದಿನವು ಆ ಅದೇ ಸೂರ್ಯ ಚಂದಿರ ಚಿಕ್ಕೆಗಳ ಜಾತ್ರೆ ಬಾನಿನ ತುಂಬ;
ಮಾಗಿ ಬರದೇ ಅಲ್ಲಿ, ಇಲ್ಲಿ ಬಂದಂತೆ?
ತಾರೆಯೆಲೆ ಹಣ್ಣಾಗಿ ಕಳಚಿ ಬೀಳದೇ ನೀಲಿಯ ಮರದ
ಹರೆಹರೆಯಿಂದ,
ಮೂಡದೇ ಹೊಸ ಚಿಗುರು ಬೆಳಕು?
ನಮಗೇಕೆ, ನಮಗಷ್ಟೆ, ಏಕೆ ಋತು ಋತುವಿಗೂ ಮಾಗಿ
ಕೊಳೆವ ಬದುಕು?

ತರಗೆಲೆಯ ಪ್ರಶ್ನೆಗೆ ಬೆದರಿ ನಡುಗಿ ನಿಂತಿತು ಗಾಳಿ!
ನಿಶ್ಚಿಂತವಾಗಿತ್ತು ಇರುಳು, ಏನಾದರೂ ಬೆಳಗಾಗಿಯೇ ಆಗುವುದು,
ಮತ್ತೆ ಕೂಗಿಯೇ ಕೂಗುವುದು ಕೋಳಿ.

ತಣ್ಣಗೆ ಕೊರೆವ ಬೀದಿ ಮಲಗಿತ್ತು
ಕಡೆಯ ಉತ್ತರವಾಗಿ, ಮೂಕವಾಗಿ.
ದುಂಡು ಚಂದ್ರನ ತಂದು ಕಂಬ ಕಂಬದ ತುದಿಗೆ
ಕೀಲಿಸಿದ ಹಾಗಿದ್ದ ದಾರಿಯ ದೀಪ
ತೂಗಡಿಸಿತ್ತು—ಮೌನವಾಗಿ.

ಬಿಡುಗಡೆ—ಬಂಧನ

ಉಪ್ಪು ಕಡಲನು ಉತ್ತು ನಡೆವ ನೇಗಿಲ ದೋಣಿ,
ಸುತ್ತಲೂ ಕತ್ತಲಿನ ತರಂಗವಾಣಿ!
ಗಜಿಬಿಜಿಯ ಗೊಂದಲದ ಬಣ್ಣ ಬದುಕಿನ ಭ್ರಮರ
ಕಿಕ್ಕಿರಿದ ತೀರವದೊ ದೂರ ದೂರ.
ಇಲ್ಲಿ ಬಿಡುಗಡೆ ಗಾಳಿ ಹಾಡುತಿದೆ ಕಿವಿಯೊಳಗೆ
ಈ ಚೆಲುವಪಾರ.

ಎತ್ತರದ ಹುತ್ತಗಳ ಹಾವುಗಣ್ಣಿನ ಮಹಲು,
ಬಳಬಳಸಿ ಮೈಸೋತು ಬಿದ್ದ ದಾರಿಯ ನೆರಳು,
ಮಧುಮತ್ತ ಉನ್ಮತ್ತ ಮಂತ್ರಗಾರನ ಮಾಟ
ಆ ಕಡೆಯ ನೋಟ.

ಅಲ್ಲಿಂದ—
ಬಿಡುಗಡೆಯು ಕಡೆಗೆ ಬಿರುಗಣ್ಣ ತೆರೆದು ದಿಟ್ಟಿಸುತಿಹುದು
ಬಂಧನದ ದೀಪಮಾಲೆ.
ಇಲ್ಲಿಂದ—ತೆರೆತೆರೆಯ ಸ್ವಚ್ಛಂದ ಕವನವನು ಬರೆಯುತಿದೆ
ಕಡಲ ಲೀಲೆ.

ಹೀಗೆಯೇ ಹೀಗೆಯೇ ತೆರೆಯ ಕುದುರೆಯನೇರಿ
ಸಾಗಬಾರದೆ ದೋಣಿ ಮುಂದೆ ಮುಂದೆ.
ತೀರವುಳಿಯಲಿ ಹೀಗೆ ಹಿಂದೆ ಹಿಂದೆ.
ಸಾಗಬಾರದೆ ಹೀಗೆ, ಅವ್ಯಕ್ತ ಗಂಭೀರ ತಮದಂತರಾಳದಲಿ
ಬೇರೊಂದು ಬೆಳಕನ್ನು ಬಗೆದು ಹುಡುಕಿ,
ಗರುಡ ರೆಕ್ಕೆಯ ತೊಟ್ಟು ಚಿಕ್ಕೆ ಗಣ್ಣನು ಬಿಟ್ಟು
ನೀಲಿಯಾಳವ ಕುಕ್ಕಿ ಮುಗಿಲ ಮುಕ್ಕಿ.

ಸಾಗಬಾರದೆ ಮುಂದೆ
ತೀರ ಉಳಿಯಲಿ ಹಿಂದೆ
ಇರಲಿ ಜೊತೆಯೊಳು ನವ್ಯ ಚೈತನ್ಯವೊಂದೆ.

*   *   *   *

ಕನಸಿನಲೆಗಳನೇರಿ ತೇಲುತಿರೆ ತೆಕ್ಕನೆಯೆ
ತಿರುಗಿ ಸಾಗಿತು ದೋಣಿ ದಡದ ಕಡೆಗೆ.
[ಕಾಳಸರ್ಪದ ಕಣ್ಣ ಸೆಳೆತದಲ್ಲಿರೆ ಹಕ್ಕಿ
ಬಾನ ಚಿಕ್ಕೆಯ ಕಡೆಗೆ ಹೊರಡಬಹುದೆ?]
ದಡಕೆ ಕಟ್ಟಿದ ದೋಣಿ ದಡಕೆ ಬರುವುದೆ ಸಹಜ
ಕಟ್ಟಕಡೆಗೆ.

ಅಯ್ಯೋ, ಏನಿದು ಮತ್ತೆ? ತಿರುಗಿ ಬಂದಿತೆ ತೀರ?
ಕಿವಿಯೊಳಿನ್ನೂ ಇಹುದು ಹೆಗ್ಗಡಲ ಮರ್ಮರ.
ನಿಟ್ಟುಸಿರೆಳೆದು, ಹತ್ತಿ ನಿಂತೆವು ದಡಕೆ,
ದೋಣಿ ಮೈ ಚಾಚಿತ್ತು ಕಡಲಲೆಯ ಹಾಸುಗೆಗೆ!

ಅರೆಮುಗಿದ ಕವನ

ಅರೆಮುಗಿದ ಕವನ ಇದು,
ಯಾರಿಗೂ ಓದದಿರು
ಕೇಳಿದರೆ ನಕ್ಕುಬಿಟ್ಟಾರು ಯಾರಾದರೂ.
ಹಾಗೆಯೇ ಮಡಿಸಿಟ್ಟುಬಿಡು ಜೋಬಿನಲಿ ಜೋಪಾನ,
ಎಷ್ಟಾದರೂ ಇದು ಅರೆಮುಗಿದ ಕವನ !

ಅರೆಮುಗಿದ ಕವನ ಇದು....
ಬ್ಯಾಂಕಿನೆಡೆ ಬಂದು ಕಂಡೆನು ನಾನು
ಕೈಯೊಳಿದೆ ರುಜುವಿರದ ಚೆಕ್ಕು,
ಹಣವಿದೆ ಅಲ್ಲಿ ; ಆದರಿದಕಿನ್ನಾರು ಹಣ ಕೊಟ್ಟಾರು
ಯಾರಿಗಿದೆ ಕೊಡುವ ಹಕ್ಕು ?
ಕೊಟ್ಟವನು ಇದಕೆ ರುಜು ಹಾಕಿದರೆ ತಾನೆ
ಕೈಗೆ ರುಪಾಯಿ ಝುಣಕು ಝುಣಕು ?
ಅವನು ಎಲ್ಲಿದ್ದಾನೊ ಹುಡುಕಬೇಕು.

ಅರೆಮುಗಿದ ಕವನ ಇದು....
ಕಲ್ಲಸೆರೆಯಲಿ ಹೂತು ಹಾಗೆಯೇ ನಿಂತಿಹುದು ಈ ಪ್ರತಿಮೆ,
ಅಹ, ಎಷ್ಟು ಚಂದ !
ಚಂದವಾದರೆ ಏನು, ಇನ್ನು ಹರಿದಿಲ್ಲವೋ
ಕಗ್ಗಲ್ಲ ಬಂಧ.
ಚಾಣ ಬಿದ್ದಿದೆ ಇಲ್ಲೆ, ಬರುವೆನೆಂದಾಡಿದವ
ಹೋಗಿ ಬಲು ಹೊತ್ತಾಯ್ತು ;
ಯಾವ ಹೋಟಲಿಗೋ ಹೋಗಿ, ಯಾವ ರೇಡಿಯೊ ಹಾಡ
ಕೇಳುತ್ತ ಕುಳಿತನೋ ಆ ಕಲೆಗಾರ,
ಈಗಲೂ ಬಾರ !

ಅರೆಮುಗಿದ ಕವನ ಇದು....
ಇದ್ದಕಿದ್ದಂತೆಯೇ ತಂತಿ ಕತ್ತರಿಸಿ
ಆರಿ ಹೋಗಿದೆ ಬಲ್ಬು ;
ಹಾಲು ನಗೆ ಬೆಳಕೆಲ್ಲ ಸತ್ತು ಕರಿಮುಸಿಯಾಗಿ
ಹರಡಿದೆ ಇಲ್ಲಿ
ಚೆಲ್ಲಾಪಿಲ್ಲಿ.
ಎಷ್ಟು ಕರೆದರಚಿದರು ಬರಲಿಲ್ಲ ಅವನು,
ಆಗಿಲ್ಲ ಇದರ ರಿಪೇರಿ.
ಯುಗ ಯುಗಾಂತರವಾಯ್ತು ನಾ ಕಾಯತೊಡಗಿ
ಆ ಅವನ ದಾರಿ !

ದೂರದಲಿ ಕಿರುಚುತಿವೆ ರೇಡಿಯೋ
ಜಗದೆಲ್ಲ ಗದ್ದಲದ ಬಾಗಿಲಿನ ಬೀಗವನು ತೆಗೆದು,
ಕಿವಿಗಳನು ಕೊರೆದು !
ಮನೆಸುತ್ತ ಕೊಡೆನಿಂತ ಮರದ ಕೊಂಬೆಯ ತುಂಬ
ಚಿಲಿಪಿಲಿಯ ಸೊಲ್ಲು.
ಮರಮರದಲ್ಲು ನಡೆದಿದೆ ಪ್ರೈಮರೀಸ್ಕೂಲು !

ಸುತ್ತೆಲ್ಲ ತುಂಬಿ ತುಳುಕಿದರೂ, ನೋಡಿ
ತಲೆಗೆ ಜಿನುಗದು ನಾಲ್ಕು ಒಳ್ಳೆ ಸಾಲು.
ಇಂದಲ್ಲ ನಾಳೆ ಇಳಿದೀತು ಮೇಲಿನ ಮೋಡಿ,
ಆದೀತು ಇದರ ರಿಪೇರಿ.
ಹೀಗೆಯೇ ಕಾಯಬೇಕಲ್ಲ ಇದು ಅದರ ದಾರಿ !

‘ ಕವಳ ತಾಯೀ ಕವಳ ’

ಇರುಳುದ್ದಕೂ ಹರಿದು ಬರುತಿದೆ ಕೂಗು :
‘ ಕವಳ ತಾಯೀ ಕವಳ ’

ಚಿಟುಗುಡುವ ಮಬ್ಬು ಮಳೆ ; ಸಿಳ್ಳು ಹಾಕುವ ಗಾಳಿ ;
ಸುಮ್ಮನೆಯೆ ಸದ್ದಿರದೆ ಬಿದ್ದ ಬೀದಿಯ ಬದಿಗೆ
ಏನನೋ ಜಾನಿಸುತ ನಿಂತ ದೀಪದ ಕಂಬ—
ಅದರಡಿಗೆ ಚಲಿಸುತಿವೆ ನೆರಳೆರಡು, ಕೈ ಕೈ ಹಿಡಿದು
ಬತ್ತಲೆಯ ಬೀದಿಯಲಿ ಒಂದೇ ಸಮನೆ ಕೂಗುತ್ತ :
‘ ಕವಳ ತಾಯೀ ಕವಳ ’

ಒಳಗೆ ಮಗು ತೊಟ್ಟಿಲಲಿ ಕನವರಿಸುತಿದೆ :
ಪಾರಿಜಾತದ ತೋಟ ಚಿಟ್ಟೆ ಬಳಗ ;
ಚಂದುಮಾಮನ ಚಿಗುರೆ ಬೆನ್ನೇರಿ ಹಾರೋಣ
ತಾರೆ ಮಲ್ಲಿಗೆ ದಾರಿ ದೂರ ದೂರ.

ಉದ್ದಕೂ ಮುಚ್ಚಿರುವ ಬಾಗಿಲು ; ಒಳಗೆ ಎಲ್ಲೋ ಬೆಳಕು
ಮಂದ ಮಂದ.
ಮಳೆ ಬಿಸಿಲು ಗಾಳಿಯಲಿ ನಾಂದರೂ, ನಿಶ್ಚಿಂತವಾಗಿರುವ
ಗೋಪುರದ ಗಡಿಯಾರ ಹೊಡೆಯುತಿದೆ ಘಂಟೆ ಹನ್ನೊಂದ.
ಹಗಲೆಲ್ಲ ಗಾಡಿಯನೆಳೆದು ಲಾಯಕ್ಕೆ ಬಂದಿದೆ ಕುದುರೆ
ಹಾರೈಸುತಿದೆ—‘ ಮತ್ತೆ ಬೆಳಗಾಗದಿರಲಿ.’
ಆಗೊಂದು ಈಗೊಂದು ಕುಡಿದ ಕೆಂಗಣ್ತೆರೆದು ಜಾರಿ ಓಡುವ ಕಾರು
ಬೀದಿಯಲ್ಲಿ !

ಬೀದಿ ಬೆಳಕಿನ ಚಾಪೆ ದೂರ ದೂರದವರೆಗೆ :
ದೀಪದೀಪದ ಕೆಳಗೆ ಸಾಗುತಿವೆ ನೆರಳೆರಡು,
ಕೈ ಕೈ ಹಿಡಿದು—ಎಂದಿನಿಂದಲೊ ಏನೊ—
ಕರುಳರಿಯುತಿದೆ ಕೂಗು ಕಿವುಡು ಬಾಗಿಲ ಹೊರಗೆ :
‘ ಕವಳ ತಾಯೀ ಕವಳ.’

ರಾತ್ರೋ ರಾತ್ರಿ—

ರಾತ್ರೋ ರಾತ್ರಿ,
ಮಾದೇಶ್ವರನ ಬೆಟ್ಟಕ್ಕೆ ಹೊರಟದೆ ಜಾತ್ರೆ!
ತಮಟೆಗಳ ಸದ್ದು,
ತನ್ನ ಪಾಡಿಗೆ ತಾನು ತಿಪ್ಪಗೆಯೆ ಮಲಗಿದ್ದ
ಇರುಳಿನೆದೆಗೊದ್ದು,
ಬಯಲಾಟದಟ್ಟಣೆಯ ಹಲಗೆ ಮುರಿಯುವ ತನಕ
ಕುಣಿವ ರಾಕ್ಷಸ ಪಾತ್ರ;
ಇದರ ತಾಳವೊ ಲಯವೊ, ದೊಪ್ಪನೆಯೆ ಮಸಿಕುಡಿಕೆ
ಬಿದ್ದು ಚೆಲ್ಲಿದ ಚಿತ್ರ!

ರಾತ್ರೋ ರಾತ್ರಿ,
ಮಾದೇಶ್ವರನ ಬೆಟ್ಟಕ್ಕೆ ಹೊರಟದೆ ಜಾತ್ರೆ!
ಚಿಕ್ಕೆ ಚಲ್ಲಾಪಿಲ್ಲಿ: ಕೋಳಿ ಕೆದರಿದ ಕಾಳು.
ಕತ್ತಲಿನ ತಿಪ್ಪೆಯ ರಾಶಿಯಂಚಿನಲಿ
ತಿಂದೆಸೆದ ಮಾವಿನ ವಾಟೆ ಆ ಚಂದ್ರ!
ವೋಂಬತ್ತಿ ಬೆಳಕಿನ ನೆಲದಿ, ಗಿಡಮರದ ನೆರಳು
ಈ ನಡುವೆ ತಲೆಗೆದರಿ ಹೊರಟಹುದು ಜಾತ್ರೆಯ ಮರುಳು.

ರಾತ್ರೋ ರಾತ್ರಿ,
ಮಾದೇಶ್ವರನ ಬೆಟ್ಟಕ್ಕೆ ಹೊರಟದೆ ಜಾತ್ರೆ!
ಇದ್ದಕಿದ್ದಂತೆ ಇದು ಎದ್ದುದೆಲ್ಲಿಂದ!
ಎಲ್ಲಿತ್ತೊ, ಈ ಕೊಪ್ಪಲಿನ ರೊಪ್ಪದಲಿ
ಹುದುಗಿದ್ದ ಭಕ್ತಿಯ ಭೂತ!
ಸದ್ಯ, ಇದು ತೊಲಗಿದರೆ ಸಾಕು, ಈ ಕಿರುಚು, ಕುಣಿತ,
ಎದೆಯಿರಿತ.
ತಾಳಬಲ್ಲನು ಅವನು ಆ ಮಾದೇಶ್ವರ;
ನಾವು ನರಮನುಷ್ಯರು, ಸದ್ಯ, ಇದು ಇಲ್ಲಿಂದ ತೊಲಗಿ
ಅಲ್ಲಾಗಲಿ ಸಮರ್ಪಿತ!

ಹೂವುಗಳ ನಿಟ್ಟುಸಿರು

ಮೈತುಂಬ ಹೂವ ತೊಡಲೇಬೇಕು
ಗಿಡವಾಗಿ ಹುಟ್ಟಿದ ಮೇಲೆ;
ಬೇಡವೆಂದರು ಕೂಡ ಬೀಳದಿದ್ದೀತೆ
ಸಂಜೆ ಮುಂಜಾವುಗಳ ರೆಕ್ಕೆ ನೆರಳು ?

ಮೈಯ ಸುತ್ತಿದೆ ಸೀರೆ, ಕಾಮನ ಬಿಲ್ಲು ನೆರಿಗೆ ನೆರಿಗೆ,
ಬಿರಿದ ತುಟಿಯಿರುಕಿನಲಿ ಸಂಜೆನಗು ಜಿನುಗೆ,
ಕಣ್ಣೊ ದೂರದ ಚಿಕ್ಕೆ, ಜೇನು ಚಂದ್ರನ ಚಿಂತೆ
ಡೇರೆ ಹೊಡೆಯುತ್ತಲಿದೆ, ಈ ಬಯಲಿನಲಿ
ನೆರೆಯುತಿದೆ ಹಗಲಿರುಳು ಸಂತೆ!

ಒಂದೇ ಸಮನೆ ಏನೇನನೋ ಬರೆವ ಕೊರೆವ ಚಪಲ
ಈ ಕೈಗಳಿಗೆ;
ಬರೆದುದನು ಉಜ್ಜುವ, ಉಜ್ಜಿ ಅಳಿಸುವ ಒಂದೇ ಕೆಲಸ
ಈ ರಬ್ಬರಿಗೆ!
ಮನವೋ ಕುದಿಕುದಿವ ಕನಸುಗಳ ಕೊಪ್ಪರಿಗೆ.

ಕಣ್ಣೆದುರು ಜಟಕದಲಿ ಕೂತು ಮರೆಯಾಗುತಿವೆ
ಹತ್ತಾರು ಹೊಸ ಮದುವೆ ಜೋಡಿ,
ಚೈತ್ರಮಾಸದ ಹೂವಿನಂಗಡಿಯೊಳಗೆ ಸಾಗುತ್ತಲಿದೆ
ನಾಗಸ್ವರದ ಮೋಡಿ!

ಇದ್ದ ಕಿದ್ದಂತೆಯೇ ಬಂದಾನೇನು, ಆ ದೊರೆಗುವರ
ಕುದುರೆ ಹತ್ತಿ—
ಕತ್ತಿ ಝುಳಪಿಸಿ, ಅರಿಗಳನು ಸದೆಬಡಿದು ಒಯ್ಯಾನೇನು
ತನ್ನನೆತ್ತಿ ?
ಬಿರು ಬಿಸಿಲ ಹಾದಿಯಲಿ ಹಾದುಹೋಗಿವೆ ಹಲವು
ಮೋಟಾರು ಕಾರು,
ಬಿದ್ದ ಧೂಳೆದ್ದು ದಳದಳದ ತುಂಬ ಮನೆಮಾಡಿದೆ.

ಸಿಳ್ಳು ಹಾಕುವ ವ್ಯೋಡ ನಸು ನಕ್ಕು ಹಾಗೆಯೇ
ತೇಲುತಿದೆ ಬಾನಿನೊಳಗೆ.

ಬಿರಿದ ಹೂವಿನ ಸುಯ್ಲು ಹುಯ್ಯಲಿಡುತಿದೆ ಇಗೋ
ಹಸುರು ಬೇಲಿಯ ಒಳಗೆ.
ಇದು ಕೇಳಬಹುದೇ ಹೇಗೆ,
ಹೇಮಕೂಟಾಚಲದಿ ತಪಗೈವ ಶಿವಗೆ?

ಇವನು

ತಲೆಯ ತಪ್ಪಲೆಯಲ್ಲಿ
ವಿಚಾರಗಳ ಕುದಿತ
ಎದೆಯ ಗೂಡೊಳಗೆನಿತೊ
ಮುರಿದ ಗಡಿಯಾರಗಳ ತುಡಿತ
ಹಗಲು ಇರುಳು.
ಹಾಸುಗಂಬಿಯ ಮೇಲೆ
ನೂರು ರೈಲಿನ ಉರುಳು ;
ಇನಿತೆ ಸ್ಪಂದನ ; ಮತ್ತೆ
ಮೌನ ಮೌನ !

ಹಗಲೊ ರಾತ್ರಿಯೊ ಏನೊ ಎಲ್ಲವೂ ಇವನ
ಬಾಳ ತಿವಿಯುತ ಮುಂದೆ ಸಾಗಿರುವುವು.
ಬೆಂಕಿ ಬಾಯನು ತೆರೆದು ನಗುವ ಮೂಡಲ ಬಾನು
ನೂರು ತೂತಿನ ಛತ್ರಿ ಬಿಚ್ಚು ವಿರುಳಿನ ಬಾನು
ನಿಡುಸುಯ್ಲಿನೊಲು ನಡೆವ ಗಾಳಿಗಳ ಹೊನಲು—
ಎಲ್ಲವೂ ಇವನನ್ನು ಅರೆಯುತಿಹವು.

ಸಿನಿಮ—ಹೋಟಲ್—ಸರ್ಕಸ್ಸು—ಆ ದೊಂಬರಾಟ
ಇಸ್ಪೀಟು—ಸಿಗರೇಟು—ಹಾವಾಡಿಗನ ಮಾಟ
ಕಾವ್ಯಪಾರಾಯಣ—ಭಾಷಣ—ಹರಿಕತೆಯ ಸವಿಯೂಟ,
ಓ ಎಷ್ಟೊಂದು—ನೋವ ಮರೆಯ್ಸಲು ಮಾನವನು
ಮಾಡಿರುವ ಹೂಟ !

ಮುರುಕು ಜೋಪಡಿಯೊಳಗೆ
ಮಳೆಯ ನೀರಳಿವಂತೆ
ಇಳಿಯುತಿವೆ ತಲೆಯೊಳಗೆ ನೂರು ಚಿಂತೆ ;
ಒಳಗೆಲ್ಲ ಕೆಸರು, ಬರಿ ಕೆಸರು ; ಅದರೊಳಗು
ಮೊಳೆಯುತಿವೆ ಆಸೆಗಳು ಹಸುರಿನಂತೆ !

ಆದರೂ, ಆದರೂ, ನಿರಾಸೆಯಲಿ ಮುಳುಗಿ
ನೋಯುನಿವನು,
ಕೋಪದಲಿ ದೈವವನು ಶಪಿಸನಿವನು ;
ಬೆಳಕ ಮುಡಿಯಲಿ ಹೊತ್ತು ನಿಂತ ಲಾಂದ್ರದ ಹಾಗೆ
ನಿಂತಿರುವನು.
ಸುತ್ತ ಅನ್ಯಾಯಗಳ ಸಂತೆ ಸಾಗಿರಲಾಗಿ
ವಿಲಯ ಮೌನದೊಳಿವನು ದಿಟ್ಟಿಸುವನು !

ಈಗೀಗ ಮನೆತುಂಬ

ಈಗೀಗ ಮನೆತುಂಬ ನಿಟ್ಟುಸಿರು, ಕಂಬನಿ ;
ಕೋಣೆ ಕೋಣೆಯ ತುಂಬ ಮುಸುಕೆಳೆದ ಮೌನ.
ಎಂದೋ ಒಂದು ದಿನ ಹಬ್ಬದಲಿ,
ಬಾಗಿಲಿಗೆ ಸಿಂಗರಿಸಿದ್ದ ಚಿಗುರೆಲೆಯ ತೋರಣ,
ಈಗ ತರಗೆಲೆಯಾಗಿ ರಪರಪನೆ ಬಡಿದಾಡುತಿದೆ
ಗಾಳಿಯ ಕಾರಣ.
ಹೊಸಿಲ ಹಣೆಯಲಿ ಮಾಸಿ ಕರೆಯಾದ ಕುಂಕುಮ ;
ಬಾಗಿಲೆಡೆ ಮಾಸಿ ಚದುರಿರುವ ರಂಗೋಲಿ :
ಜಡಿ ಮಳೆಯ ಬಡಿತಕ್ಕೆ ಗುರುತಳಿದ ದಾರಿ.

ತುಟಿಯ ಬಾಗಿಲ ಹಿಂದೆ ಅಗುಳಿಯ ಜಡಿದು ಕಾದಿದೆ ನೋವು,
ನೆಲಮಾಳಿಗೆಯ ತಳದಲ್ಲಿ ಕುಲುಮೆಗಳ ನಿಟ್ಟುಸಿರು, ಬುಸುಗುಟ್ಟುವಂತೆ
ಹಾವು.
ಪಿಸುಮಾತು : ಮರಳುಗಾಡಿನ ನಡುವೆ ಒಂಟೆಗಳ ಹೆಜ್ಜೆ.
ಬಿರುಬಿಸಿಲಲ್ಲಿ ಎಲ್ಲೋ ಹಸುರ ಕೈಬೀಸಿ ಕರೆವ ಓಯಸಿಸ್ಸಿನ ಕನಸು.
ಕನಸು....ಕನಸು....ಕ....ನ....ಸು....

ಬಿಡುಗಡೆ

ಮನೆಯ ಸುತ್ತಲು ನೆರಳು........
ಯಾವುದೋ ಉರುಳು ಕೊರಳನರಸಿದೆ ಇರುಳು.
ಗೋಡೆಯ ಮೇಲೆ, ಛಾವಣಿಯ ಮೇಲೆ
ಸದ್ದು ನಿದ್ರಿಸುತಿರುವ ಮರದ ಎಲೆಗಳ ಮೇಲೆ
ಕಾಣಿಸದ ನೆರಳೊಂದು ಸಂಚರಿಸಿದೆ
ರೂಪವಲ್ಲದ ಭೀತಿ ಸುಳಿದಾಡಿದೆ!

ಲಕ್ಷನಕ್ಷತ್ರಗಳ ಬಿರುಗಣ್ಣ ಬೆಳಕಿನಡಿಯಲ್ಲಿ,
ಕತ್ತಲಲಿ ಕದಡಿರುವ ಮನೆ ಮನೆಯ ರೂಹುಗಳು,
ಮರವೆಯಲಿ ಮುಳುಗಿರುವ ಹಳೆ ನೆನಪಿನಂತಿರಲು
ಉರಿಯುತಿದೆ ಕೋಣೆಯಲಿ ಹಣತೆಯೊಂದೇ ಒಂದು
ಸಾಕ್ಷಿಯೊಲು ನಿಂದು!

ಉಸಿರ ತಿದಿಯೊತ್ತುತಿದೆ,
ಮುದಿಯೊಡಲು ನಡುಗುತಿದೆ,
ವ್ಯರ್ಥಗತ ಶತಮಾನ ಶೂನ್ಯದೊಲು
ಕಣ್ಣ ನೋಟ
ಎಲ್ಲಿಗೋ ಓಟ!

ಪಟ ಪಟನೆ ರೆಕ್ಕೆ ಬಡಿದಿದೆ ಹಕ್ಕಿ,
ಇಷ್ಟು ದಿನ ಈ ಪಂಜರದಿ ಸಿಕ್ಕಿ,
ಇಂದು ಬಿಡುಗಡೆಯ ಬಯಕೆಯುಕ್ಕಿ ;
ಒಂದೇ ಸಮನೆ ತಾರಾಡುತಿದೆ, ಅದೋ
ಪಂಜರದ ಒಳಗೆ.
ಸುತ್ತಲೂ ಕಂಬಿ, ಬರಿ ಕಂಬಿ ;
ಹಾರೈಸುತಿದೆ ಹಕ್ಕಿ ಬಿಡುಗಡೆಯ ನಂಬಿ
"ಸಾಕು ಮಾಡೋ ಜನ್ಮ, ಸಾಕು ಮಾಡೋ."
....

ಕಡೆಗೆ ಕರೆ ಮುಟ್ಟಿತು,
ಅವನೆದೆಯ ತಟ್ಟಿತು.
ಕಾಣದಿಹ ಕೈಯೊಂದು ಬಂದು ಬಾಗಿಲ ತೆರೆದು
'ಹೊರಡಿನ್ನು'—ಎಂದಿತು.
ಮುಗಿಲುದ್ದ ಚಿತ್ರಪಟ ಬಿಚ್ಚಿತು
ಮೆರವಣಿಗೆ ನಡೆಯಿತು.
ಬಲುದಿನದ ಬಯಕೆ ಕಡೆಗಿಂದು ಸಂದಿತು!

ಬರಿಯ ಪಂಜರ ಬಿತ್ತು : ಯಾರೋ ಎಸೆದ
ಮುರುಕುಪೆಟ್ಟಿಗೆಯಂತೆ,
ಬಿರುಗಾಳಿಯಲಿ ಬಿದ್ದ ಮುರುಕು ಗುಡಿಸಲಿನಂತೆ,
ಹರಿದೆಸೆದ ಹಳೆ ಬಟ್ಟೆಯಂತೆ.
ಮುಗಿಯಿತು ಚಿಂತೆ,
ಇನ್ನು ನಿಶ್ಚಿಂತೆ.

ನಿಡುಬಯಸಿ ಕಾದಿದ್ದ ಘಳಿಗೆ ಬಂದಿತು ಕಡೆಗೂ ;
ಬಿರುಗಾಳಿಯಬ್ಬರದಿ ಹೊಯ್ದಾಡಿದೀ ಹಡಗು
ಮುಳುಮುಳುಗಿ ತಳ ಕಂಡು
ವಿಶ್ರಾಂತಿ ಪಡೆಯಿತು,
ಪಯಣ ಕಡೆ ಮುಟ್ಟಿತು.

* * * * *

ಹಸಿದ ನೆಲ 'ಆ' ಎಂದು ಬಾಯ್ದೆರೆದು ಕೇಳಿತ್ತು :
ಬಂತೆ ಆಹಾರ ?
ಅದರ ಋಣ ಅದಕೆ ಸಂದಾಯವಾಯಿತು.
ಹೊಂಚುಹಾಕುತ ಕಾದ ಪಂಚಭೂತಗಳೆಲ್ಲ
ತಮ್ಮ ಪಾಲುಂಡವು ;
ತೃಪ್ತೋಽಸ್ಮಿ ಎಂದವು.

* * * * *

ಬಲು ದಿನದ ನರಳನಾಲಿಸಿದ ಗೋಡೆಗಳು
ನಿಟ್ಟುಸಿರ ಬಿಟ್ಟವು.
ಅವಳ ಬಾಳಿನ ಕತೆಯ ಪುಟಪುಟವ ಮಗುಚಿ
ಯಾವ ಕಯ್ಯೋ ಏನೊ ಪುಸ್ತಕವ ಮುಚ್ಚಿತು.
ಬೆಳಕಿರುವ ತನಕ ಹೊಲದಲ್ಲಿ ಮೈಮುರಿದು ದುಡಿದು,
ಬೀಜವ ಬಿತ್ತಿ, ತೆನೆತೆನೆಯನೆತ್ತಿದ ಜೀವ
ನಾಟಕವ ಮುಗಿಸಿತು.
ತಾಯ್ತನದ ಅಕ್ಕರೆಯ ಸವಿಯೊಂದೆ ಉಳಿಯಿತು.

ಒಂದಿರುಳು

ಇದು ಚೆಲುವೀ ರಾತ್ರಿ
ಮೌನದೊಳಿದೆ ಧಾತ್ರಿ—

ಇದು ಚೆಲುವೀ ಬೆಳಕಿನ ಕಣ್ಣರಳಿಸಿ ನೋಡುವ
ದೀಪದ ಮಾಲೆಯ ಸಿಂಗಾರ,
ಇದು ಚೆಲುವೀ ಇರುಳಿನ ಕೊರಳೊಳಗಿನ
ತಾರಾಹಾರ,
ಕತ್ತಲಿಗೂ ಬೆಳಕಿಗು ಏನೋ ವ್ಯವಹಾರ!

ಕತ್ತಲ ನೆತ್ತಿಯೊಳೆತ್ತುವ ಸಾಹಸದಲ್ಲಿವೆ
ಈ ದಾರಿಯ ದೀಪ,
ಲಕ್ಷಾಂತರ ಆಸೆಯ ಪ್ರತಿರೂಪ.
ದೂರಕೆ, ಬಹುದೂರಕೆ ಹಾಸಿದೆ
ಪೈಶಾಚಿದ ಮೂಕತೆಯೊಲು ಟಾರ್ ಬೀದಿ.
ಇಕ್ಕೆಲದಲಿ ತೂಗಡಿಸಿವೆ ಸಾಲ್‌ಮರಗಳು,
ಎದೆಯೊಳು ಹಕ್ಕಿಯ ಕನವರಿಕೆ!

ಬೆಳಗಾಗಲು ಉಜ್ಜುವುದೀ ಬೀದಿಯ ಮೈಯನು
ಸಾವಿರ ಬಗೆ ಸದ್ದಿನ ಹೆಜ್ಜೆ.
ಬೆಳಗಾಯಿತೊ, ಬಾಯ್ ತೆರೆಯುವುವೀ ಅಂಗಡಿ;
ಹೋಟೆಲುಗಳ ರೇಡಿಯೊ ಕಿರುಚಾಡುವ ದನಿ
ಬಲೆಯಾಡುವುದೀ ಬೀದಿಯಲಿ.
ಸಾವಿರ ಪ್ರಶ್ನೆಯ ನೊಗವೆಳೆಯುವ ಮುಖ ನಡೆವುವು
ಬೀದಿಯ ಕಾಲುವೆಯೊಳು ಕಸಕಡ್ಡಿಯ ಹೋಲಿ.
ಈಗಲೆ ಹೊನಲಾರಿದೆ, ಈ ಬೀದಿಗೆ ತುಸ ಬಿಡುವು
ಇರುಳಿನ ತಂಪೊಳು ಹರಿಯಬಹುದು ಇದರೆದೆ ನೋವು.

ಬೆಳುದಿಂಗಳ ಹಾಲೀಂಟಲು
ತುಸ ಇದಕೂ ಜೀವ—
ಕಸ್ರನೆ ಟಾರೆದೆಯೊಳಗೂ ಮಿಂಚುವುದನಂತ ಭಾವ!

ಮುಂಗಾರಿನ ಮಳೆಗೆ,
ಎಷ್ಟೋ ಸುಖವಿದಕೆ;
ಮುಗಿಲಿನ ಜಲಗಾರನ ಸಾವಿರ ಮಳೆ ಹನಿಗಳ ಪೊರಕೆ,
ಗುಡಿಸುವುದೀ ಮೈಯನು, ಹೊಮ್ಮಲು ಕರಿಮೈಯೊಳು
ಬಿಸಿಯುಸಿರಿನ ಹರಕೆ!

ಆ ಇರುಳು,
ಇದರೆದೆಯೊಳು ಲಕ್ಷಾಂತರ ನೆರಳು.
ಮಳೆ ಬಂದಿರುಳೊಳು ದೀಪದ ಬೆಳಕೊಳು
ಸಹಸ್ರ ಕಲ್ಪನೆ ನೀರಾಡುವ ನೋಟ,
ಹೊಳೆ ಹೊಳೆಯುವ ದಾಸರಹಾವೊಂದುದ್ದಕು
ಮೈ ಚಾಚಿದ ಮಾಟ!

* * * * *

ಇಗೊ ಮೌನ,
ಅಲ್ಲೂ ಇಲ್ಲೂ ಎಲ್ಲೂ ಬಲೆಯಾಗಿದೆ ಮೌನ,
ನಟ್ಟಿರುಳಿನ ಮೌನ.
ಆಗೊಮ್ಮೆಗೆ ಈಗೊಮ್ಮೆಗೆ ಈ ಬಲೆಯೊಳು
ಚಲಿಸುತಲಿದೆ ಸದ್ದಿನ ಜೇಡ!
ಎಂದೋ, ಮುಂದೆಂದೋ,
ಈ ಕಗ್ಗತ್ತಲ ನಿಡು ಮೌನವೆ ಶಾಶ್ವತವೋ,
ಎನ್ನುವ ಪರಿಭಾವನೆಯೊಳು ಮುಳುಗಿದ ತೆರ
ದಾರಿಯ ದೀಪಗಳೆಲ್ಲವು ಚಿಂತಾಗಾಢ.

* * * * *

ಅದೊ ಗೂಬೆ!
ಘೂಕೆನುತಿದೆ....‘ ಇವನಾವನು ನಟ್ಟಿರುಳೊಳು ನನ್ನಂತೆ!
ಇವನಿಗು ಇರುಳಲೆಯುವ ಚಿಂತೆ!’
ಓ! ಚೆಲುವೀ ದನಿ, ಸವಿಯೀ ದನಿ, ದಿಟಕೂ!
ನಗದಿರು, ನೀ ನಗದಿರು,
ಹಗಲಿನ ದನಿಯನುಭವದಳತೆಯ ಕೋಲಿಂದಿದನಳೆಯದಿರು
ವಿಕಾರವೆನ್ನುತ ಹಳಿಯದಿರು.
ಇದು ಸರಿ, ಈ ಇರುಳಿನ ಭಯ ಭೀತಿಯ ಕವನ;
ಇದು ಕತ್ತಲ ವ್ಯಾಖ್ಯಾನ!
ಆಯಾ ಋತಕೊಪ್ಪುವ ಅಭಿವ್ಯಕ್ತಿಯ ಗಮನಿಸು,
ಬೆಲೆ ಕಟ್ಟು;
ನಿನಗರಿಯುವುದಾಗಲೆ ಸೌಂದರ್ಯದ ಗುಟ್ಟು.

*   *   *   *

ಮುತ್ತಿದೊ ಮೌನ.
ನಡುರಾತ್ರಿಯ ಮೌನ.
ಅದೊ! ಢಣ್ಣೆನುತಿದೆ ದೂರದ ಗೋಪುರದಾ
ಗಡಿಯಾರ.
ಮೌನದ ಕೊಳದೊಳಗಾಗಿದೆ ಸದ್ದಿನ ಅಲೆ ಅಲೆಗಳ
ಅನುರಣನ!
ಶಿಳ್ಳೆನುತಿದೆ ಗಸ್ತಿನ ಪೋಲೀಸರ ‘ ಶೀಟಿ ’
ಕತ್ತಲ ಮಿಾಟಿ.

ಇಗೊ ಎಲ್ಲಿಂದಲೊ ಇತ್ತಲೆ ಧಾವಿಸುತಿದೆ
ಕೆಂಗಣ್ಣಿನ ಲಾರಿ!
ಎಚ್ಚರುತಿದೆ ನಿದ್ದೆಯ ದಾರಿ,
ಬೆಚ್ಚುತಲಿದೆ ನಿದ್ದೆಯ ದಾರಿ....

ಕಣ್ಣುಜ್ಜುತ ಗೊಣಗುತಲಿವೆ ದಾರಿಯ ದೀಪ:
“ ಏನೀ ಶಾಪ ;
ಇಲ್ಲ, ಬಿಡುವೆಂಬುದೆ ಇಲ್ಲ,
ಈ ಬಡ ಜೀವಕೆ ಎಂದೂ ಯಾವುದಕೂ
ಬಿಡುವಿಲ್ಲ....”

ಔತಣ

ಮುಗಿದಿಹುದು ಹಿರಿದೊಂದು ಔತಣ
ಸುತ್ತಲೂ ಬಿರು ಬಿಸಿಲು ರಣರಣ!
ಮೂಕ ಸಾಕ್ಷೀ ಭೂತ ಮುದಿಯ ಹುಣಿಸೆಯ ಮರದ
ಮರುಕ ಸುಯ್ಯಿತು ಗಾಳಿಯೊಲು ಮಂದ ಮಂದ,
ದೂರದ ಗುಡ್ಡ ಮೌನ ನಿಷ್ಪಂದ
ಎಷ್ಟೊಂದು ಅತಿಥಿ ಅಭ್ಯಾಗತರ ಸಂತೆ ನೆರೆಯಿತು ಇಲ್ಲಿ
ಏನು ಬಿಸ್ವಂದ!
ಹಸಿರು ಚಪ್ಪರವಿಲ್ಲ, ಓಲಗದ ದನಿಯಿಲ್ಲ,
ಆದರೂ ಊಟ ಪುಷ್ಕಳ!
ಮೊಳೆವ ಹಸುರಿನ ಹಸೆಯ ಬಯಲ ಮಂಟಪದಲ್ಲಿ
ನೂರು ಭೋಜನ ಪ್ರಿಯರ ಕೋಲಾಹಲ!

*　　　*　　　*　　　*

ಔತಣಕೆ ಕರೆ ಬೇಕೆ?
ಅಡಿಗೆಯ ಕಂಪು ಮುಗಿಲೆತ್ತರಕೆ ಕುಣಿಕೆಯನೆಸೆದು
ಸೆಳೆದಿರುವಾಗ, ಆಹ್ವಾನಪತ್ರಗಳ ಹಂಚಬೇಕೇ?
ಇಳಿದು ಬಂದವು ನೂರು ರೆಕ್ಕೆ ಕೊಕ್ಕಿನ ಬಳಗ
ಶ್ವಾನವಾದನಗೀತ ಸ್ವಾಗತಿಸಲು,
ಸಾಗಿತೌತಣ ಇಲ್ಲಿ ಮೂರು ಹಗಲು!

ಉಕ್ಕಿನ ಕೊಕ್ಕು ಕೆಂಗಣ್ಣ ಬೆಳಕನು ಬಿಟ್ಟು
ಬಗಿಯತೊಡಗಿದುವಿಲ್ಲಿ ಕರುಳ ತೊಡಕ,
ನರನರವ ಕಣಕಣವನಗಿದು ಚಪ್ಪರಿಸಿದುವು
ಕಡೆಗಾಣುವನಕ.
ಹದ್ದು ನಾಯಿಯ ವಿಜ್ಞಾನ ಬುದ್ಧಿಯ ಹಲ್ಲು
ಬಿಚ್ಚಿ ನೋಡಿದುವಿಲ್ಲೆ ಪ್ರಯೋಗಶಾಲೆ
ಕಡೆಗೆ ಉಳಿದಿಹುದಿಷ್ಟೆ—ಕಂಕಾಲಮಾಲೆ!

ಯಾರವನು ಯಾತ್ರಿಕ?
ಇಲ್ಲಿ ನಿಲ್ದಾಣದಲಿ ತನ್ನ ಕಂತೆಯನಿಂತು
ಒಗೆದು ನಡೆದಿಹನೆತ್ತ? ಯಾವ ಲೋಕ?
ನನಗೆ ತನಗೆನ್ನುತಿವೆ ಗೃಧ್ರಶುನಕ!
ಕಡೆಗೆ ಉಳಿದಿಹುದೇನು? ದೊಡ್ಡ ಎಲುಬಿನ ಗೂಡು:
ಮನೆ ಮುರಿದು, ಗೋಡೆಗಳುದುರಿ, ಹೆಂಚೆಲ್ಲ ಹಾರಿ,
ನಿಂತಿಹುದು ತೊಲೆ ಕಂಬ ಗಳು ಬಿಗಿದ ಮಾಡು!

* * * *

ಕರೆಯುತಿದೆ ಹಸಿರು ಚಪ್ಪರವದಿಗೊ
ಲಲಿತ ನಾಗಸ್ವರದ ಮೋಡಿಯಲ್ಲಿ.
ಆ, ಅದೋ ಮದುವೆ ಮನೆ, ಅಡಿಗೆ ಆಗಿರಬಹುದು,
ಜನರು ಕೂತಿರಬಹುದು ಪಂಕ್ತಿಯಲ್ಲಿ.
ಥೂ, ಏನಿದೇನಿದು ಇಲ್ಲಿ, ಈ ಹೊಲದ ಮಣ್ಣಿನಲಿ
ಮುದಿ ಎತ್ತು ಸತ್ತಿಹುದು ದುರ್ವಾಸನೆ,
ರಣಹದ್ದುಗಳ ಊಟ ಪೂರೈಸಿದೆ.

* * * *

ತಾನೆ ಉತ್ತುದು ಹೊಲವು,
ತಿಂಗಳೊಂದರ ಹಿಂದೆ ಈ ಇದೇ ಹೆಗಲಿನಲಿ
ಇತ್ತು ನೊಗವು.
ಹರಿದು ಚಲ್ಲಾಪಿಲ್ಲಿಯಾಗಿ ಬಿದ್ದಿಹ ದೇಹ
ಈ ಮಣ್ಣ ಕಣಕಣವ ಉತ್ತುದುಂಟು.
ಯಾರು ಬಿಟ್ಟರು ಕಡೆಗೆ ಮಣ್ಣು ಕೈಬಿಟ್ಟೀತೆ?
ಅದಕು ನಮಗೂ ನಿತ್ಯ ತಾಯಿನಂಟು.

ಬಂದ ಮಳೆಯನು ಕುಡಿದು,
ಕವಚವನ್ನೊಡೆದು,
ಮುಗಿಲ ನೋಡಲು ಬಂದ ಹಸಿರ ಪಯಿರು
ಬಿದ್ದ ಬಾಳಿನ ಸುತ್ತ ಶಾಸನವ ಬರೆದಿಹುದು
ಚೆಲುವಿನುಸಿರು!

" ಮೇಷ್ಟ್ರು "

ಸುತ್ತ ನಾಲ್ಕರ ಮುಗ್ಗಿ ಒಟಗುಡುವ ಕಪ್ಪೆ ;
ಬೇಸರದ ಮುಖ ಮುಂಡಿಸಿದೆ ಕುರ್ಚಿಯಲಿ
ಕೆಸರ ಕುಪ್ಪೆ !
ಯಾವ ಮಾತಾಡಿದರು ಉಸಿರಿರದ ಕುಸಿದ ದನಿ
ಸಪ್ಪೆ ಸಪ್ಪೆ..

ನೂರಾರು ತೆರೆ ಬಂದು ರಪ್ಪಸಪ್ಪಳಿಸಿರಲು
ಕುಸಿವ ದಡದಂತಿರುವ ಮುರುಕು ಒಡಲು.
ಜನ್ಮ ಜನ್ಮಾಂತರದ ಕರ್ಮವಂಟಿದ ಹಾಗೆ
ವಿಶ್ವಭೂಪಟದಂಥ ಹಳೆಯ ಕೋಟು !
ಈ ಮುರುಕು ಕಟ್ಟಡಕೆ ಹರುಕು ಗೋಪುರದಂತೆ
ನಿಂತ ಪೇಟ,
ಶಿವ ಶಿವಾ ಇದು ಯಾವ ಮಾಟ ?

ಇದಕೊಂದು ಮನಸೆ ?—ನೂರು ಕನಸಿನ ಜರಡಿ !
ಪಾಳು ಕಗ್ಗವಿಯಲ್ಲಿ ಮೊರೆಯುತಿವೆ ಕೇಳು ಅದೊ
ನೂರು ಹುಲಿ ಕರಡಿ ;
ಇದ್ದ ದೇಗುಲ ಭಗ್ನ, ಬಾವಲಿಯ ಗರುಡಿ !

ಸುತ್ತ ಸಾಗಿದೆ ಮುಗ್ಗಿ–ಮುರುಕು ಭಾವಣಿಯ ತಟ್ಟೆ
ಟೇಬಲ್ಲಿಗಾಗಾಗ ಬೆತ್ತವನು ಕುಟ್ಟಿ
ಮಗ್ನವಾಗಿದೆ ಪ್ರಾಣಿ ಚಿಂತೆಗಳ ಮುಟ್ಟಿ.

ಹೊಡೆದೀತೆ ಗಂಟೆ ?
ಯಾವಾಗ ಮುಗಿದೀತು ಈ ಗೋಳು ಸಂತೆ ?
ಈ ಬಾಳಿಗೂ ಒಂದು ಮುಗಿವಿಲ್ಲದುಂಟೆ ?
ಹೊಡೆಯದೇ ಇನ್ನಾದರೂ ಕಡೆಯ ಬಿಡುಗಡೆಯ ಗಂಟೆ ?

ಮಾಗಿ

ಮಂಜು ಬಿಳಿನಂಜಾಗಿ ಬೀಸಿತು ಮೇಲೆ ; ಇದ್ದ
ನಾಲ್ಕಾರು ಹಣ್ಣೆಲೆಗಳೂ ಉದುರಿ ಮೈ ಬೋಳು.
ಒಮ್ಮೆ ಹಸುರೆಲೆ ಚಿಗುರು ಹಣ್ಣು ಹೂ ತೂಗಿದ್ದ
ಬದುಕೆಲ್ಲ ಬ್ಬರಬಡಿದ ಎಲುಬುಗೂಡಿನ ಪಾಳು !
ನಿಸ್ತೇಜ ರವಿ ; ಕಳೆಯಿರದ ತಣ್ಣದಿರ ; ಬೆಪ್ಪ
ಕಣ್ ಬಿಡುವ ಇರುಳ ನಭ ; ದುರ್ಬಲರ ನೆಲೆವೀಡು !
ಕೊರೆ ಕೊರೆವ ಕರೆಕರೆಯ ಸೂಜಿಗಾಳಿಗೆ ಈಡು
ಸೋತು ಸಾಯದ ಬದುಕು ! ಹರಿವುದೆಂದಿಗೆ ಹೆಪ್ಪ-
ಗಟ್ಟಿಸುವ ಈ ಮಾಗಿ ? ಬಾನೆಲ್ಲ ತಿಳಿಯಾಗಿ
ಮುನ್ನಿನೊಲು ಬೆಳಗೀತೆ ಸೂರ್ಯ ಚಂದ್ರರ ಕಾಂತಿ ?
ಮತ್ತೆ ಮೊಳಗುವುದೇನು ಆ ವಸಂತನ ಕ್ರಾಂತಿ ?
ಬೋಳಾದ ಎದೆಯಲ್ಲಿ ಚಿಗುರು ಹೂವನು ತೂಗಿ
ನಿಲುವ ಒಂದೇ ಕನಸು ಈ ಬಾಳಿಗಾಧಾರ ;
ತೇಲಬೇಕೇ ಇನ್ನು ? ಎಲ್ಲಿ ದೂರದ ತೀರ ?

ಒಂದು ಮಾಗಿಯ ಸಂಜೆ

ಬಿಗಿದಿಹುದು ಬುಸುಗುಡುವ ಶ್ವೇತಸರ್ಪದ ಕೊರೆತ
ಮೆಯ್ಯ ಹಸುರನ್ನೆಲ್ಲ ಹೀರಿ ಹೀರಿ!
ನರ ನರದ ಜರಡ್ಡಿಯಲಿ ಸಂಜೆಗೆಂಪಿನ ಬಾನು
ಜಿನುಗುತಿದೆ ಇನಿತಿನಿತೆ ಜಾರಿ ತೂರಿ.

ಎಲುಬುಗೂಡಿನ ಅಚಲ ವಿಕಟ ನಾಟ್ಯದ ಭಂಗಿ;
ಪರಿಚಿತದ ಪಥದಲ್ಲಿ ಪ್ರೇತ ಮೌನ!
ಟೊಂಗೆ ಟೊಂಗೆಯ ತುಂಬ ಚಿಂತೆ ಕಾಗೆಯ ಸಂತೆ;
ಬಿಕ್ಕುತಿದೆ ತಳದಲ್ಲಿ ಕೊಂಚ ಪ್ರಾಣ!

ಕವಿವ ತಮ; ಮಿಡುಕು ಮನ; ಹಲವು ಕೊಂಬೆಯ ಚಾಚಿ
ಕಾಯುತಿದೆ ನೀರವದ ಶೋಕ ಮೌನ!
ಅಕ್ಕೊ! ಅನಿರೀಕ್ಷಿತದಿ ಕೋಗಿಲೆಯ ದನಿ ಬುಗ್ಗೆ,
ಬೋಳು ಬಾಳಿಗು ಚೆಲುವಿನಾವಾಹನ!

ನ್ಯಾಯ-ನಿಯಮ

ಬೆರಳ ಬಂಡೆಯ ನಡುವೆ ಬಜ್ಜಿಯಾಗಿದೆ ಸೊಳ್ಳೆ ;
ಒಂದೇ ಒಂದು ಚಣ ಹಿಂದೆ ಕೈಮೇಲೆ ಕೂತು
ರಕುತವನು ಕುಡಿದೊಡಲು ಈಗ ರಕ್ತದ ಮುದ್ದೆ !
ಇಲ್ಲ, ಇನ್ನಿಲ್ಲ ಇದು ಗರಿಬಂದ ಗಾನದೊಲು
ಕಿವಿಕಿವಿಯ ಬಾಗಿಲಲಿ ಸುಳಿದು ಸುತ್ತುವ ಆಟ ;
ಗೆಳೆಯರೊಡನಾಟದಲಿ ನಲಿವ ಸೊಗವಿನ್ನಿಲ್ಲ.

ಮನೆವಾಗಿಲಲಿ ಕೂತು ಕಾಯುತಿಹುದೋ ಏನೊ
ಇದನು ಹಡೆದೊಡಲು ! ಇರಬಹುದೆ ಮನೆಯಲ್ಲಿ ಮಗು-
ವಿನೊಡನಿದಕಾಗಿ ಕಾಯ್ವೊಂದು ಪೆಣ್ ? ಕೊಲೆವಾರ್ತೆ
ವೃತ್ತ ಪತ್ರಿಕೆಯಲ್ಲಿ ಜನವ ಮರುಗಿಪುದೇನು ?
ಕೊಂದ ಕೊಲೆಪಾತಕನ ಕೋರ್ಟಿಗೆಳೆಯುವರೇನು ?
ಛೇ, ಅಷ್ಟೆಲ್ಲ ಏಕೆ ಈ ಸೊಳ್ಳೆ ಸತ್ತುದಕೆ ?
ನ್ಯಾಯ-ನಿಯಮಗಳೆಲ್ಲ ಮಾನವರ ಲೋಕಕ್ಕೆ !
ಒಂದೇ ದೇವರ ಸೃಷ್ಟಿ, ಎಷ್ಟೊಂದು ನಡವಳಿಕೆ !

ಬಂತು ಬೆಳಕು

ಬಂತು ಬೆಳಕು ಬಂಗಾರದ ನಗೆ—
ಎವೆ ತೆರೆದುವು ಕಿಟಕಿ.
ಮರ ಮರದಲಿ ಮಗುವಾಡಿತು
ಹಕ್ಕಿ ಗೆಜ್ಜೆ ಗಿಲಕಿ !

ಬಂತು ಬೆಳಕು ಬಂಗಾರದ ನಗೆ—
ಸ್ವಿಚ್ಚು ಮೇಲೆ ಕೆಳಗೆ.
ಬೆಳಕು ಬಣ್ಣಗಳ ಹೂವು ತೂಗಿದುವು
ನಿಂತ ಗಿಡಕೆ ಮರಕೆ !

ಬಂತು ಬೆಳಕು ಬಂಗಾರದ ನಗೆ—
ಶುರುವಾಯಿತು ಗಿರಣಿ !
ಅಲ್ಲೂ ಇಲ್ಲೂ ಎಲ್ಲೂ
ಬಗೆ ಬಗೆ ವಾಕ್ಸರಣಿ.

ಬಂತು ಬೆಳಕು ಬಂಗಾರದ ನಗೆ—
ಸಾಲು ಸಾಲು ತಿಪ್ಪೆ.
ರಾಜಕೀಯ ಬಣ/ಸಭೆಯ ಸೇರಿಸಿವೆ
ಹಸಿರು ಹಳದಿ ಕಪ್ಪೆ !

ಬಂತು ಬೆಳಕು ಬಂಗಾರದ ನಗೆ—
ಗೋಡೆ ತುದಿಗೆ ಕೋಳಿ !
'ನಾನೆ ಅಧ್ಯಕ್ಷ ಈ ಹೊಸ ರಾಜ್ಯಕೆ,
ನನ್ನ ಮಾತು ಕೇಳಿ.'

ಬಂತು ಬೆಳಕು ಬಂಗಾರದ ನಗೆ—
ಹೊರಟವಣ್ಣ ಎಮ್ಮೆ.
'ಹೋಟೆಲ ಕಾಪಿಗೆ ಹಾಲು ಕರೆಯುವುದೆ
ನಮ್ಮ ಕುಲಕೆ ಹೆಮ್ಮೆ.'

ಬಂತು ಬೆಳಕು ಬಂಗಾರದ ನಗೆ—
ಪತ್ರಿಕೆ ಮಾರುವ ಹುಡುಗ,
ಹರಡುತಿರುವನದೊ ಬೆಳಗಿನ ಬೀದಿಗೆ
ನೂರು ಸುದ್ದಿ ಪಿಡುಗ.

ಬಂತು ಬೆಳಕು ಬಂಗಾರದ ನಗೆ–
ಗುಡಿ ಗಂಟೆಯ ಮೊಳಗು,
ಮೊದಲಿನಂದದೊಳು ಕೇಳದಾಗಿಹುದು,
ಸುತ್ತ ಬರಿಯ ಗುಡುಗು !

ಸಂಜೆ ದಾರಿ

ಕೈ ಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ,
ಹೊಳೆ ಹೊಳೆವ ಕೆಂಗಣ್ಣು ಜೋಲ್ವನಾಲಗೆ ಬಾಯಿ!
ಸಂಜೆ ಮುಗಿಲಿನ ಕೆಳಗೆ
ದೂರದೂರದವರೆಗೆ
ಮುಗಿವಿರದ ಪ್ರಶ್ನೆಯೊಲು ಹಾಸಿರಲು ಟಾರ್ ಬೀದಿ,
ಕೈ ಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ ಮುಂದೆ ಮುಂದೆ
ಹಿಡಿದ ಕೈ ಸಾಗುತಿದೆ ಹಿಂದೆ ಹಿಂದೆ!

ಹಗಲೆಲ್ಲ ಗಾಡಿಯನೆಳೆದು ಸೋತು ಸುಸ್ತಾದ
ಜಟಕಾ ಕುದುರೆಯಂತೆ,
ಸೋತ ದಳಪತಿಯಂತೆ,
ಕೆನ್ನವಿರ ತಲೆಗೆದರಿ ಮುಳುಗುತಿಹನಲ್ಲಿ ಅದೊ
ಮುದಿಯ ಸೂರ್ಯ,
ಮುಗಿಲ ಕೊತ್ತಳದಲ್ಲಿ ಮೊಳಗುತಿದೆ ಆಗಲೇ
ಇರುಳ ತೂರ್ಯ!

ಅಳಿದುಳಿದ ಬೆಳಕಿನಲಿ ತಲೆಯನೆತ್ತಿಹುದಲ್ಲಿ
ಆಫೀಸು ಕಟ್ಟಡ;
ಈಗಲೋ ಆಗಲೋ ನಿದ್ದೆಯೊಳಕೆ ಇಳಿವ
ಹಸುಳೆ ಕಣ್ ಬಿಡುವಂತೆ, ಕಿಟಕಿ ಗಾಜಿನ ಹೊಳಪು,
ನೂರಾರು ನೆನಪು.
ಓ ಅಲ್ಲೆ, ಆ ಮಹಡಿಯಲ್ಲೆ ಇದೆ
ಆಫೀಸು ರೂಮು.
ಬೆಲ್ಲನೊತ್ತಿದರೆ ಸಾಕು, ಬಂದು ನಿಲ್ಲುತಿದ್ದನು ಪ್ಯೂನು.
ಟೇಬಲ್ಲ ಮೇಲೆಯೇ ತಿರುಗುತಿದ್ದಿತು ಫ್ಯಾನು.
ನೂರಾರು ಜನ ಬಂದು ಹೊಡೆಯುತಿರಲು ಸಲಾಮು,
ಜಬರ್ದಸ್ತು, ಅಧಿಕಾರವಿತ್ತು; ಕೈಕೆಳಗಿನವರನ್ನು...

ನಡುಗಿಸುವ ಬಲವಿತ್ತು ;
ಎಲ್ಲವೂ ಇತ್ತು ; ಮೊನ್ನೆದಿನ ತಾನೇ ಇತ್ತು ;
ಈಗಿಲ್ಲ ; ಅದು ಹಳೆಯ ನೆನಪು !

* * * * *

ಮೂವತ್ತು ವರುಷದ ದುಡಿತ ;
ಅಧಿಕಾರಕ್ಕೆ, ದರ್ಪಕ್ಕೆ, ಬಿಂಕಕ್ಕೆ -
ಬೆಲೆಗೊಟ್ಟ ಜನದ ತಾಳದ ಬಡಿತ
ಅದರೊಡನೆ ಕುಣಿತ !

ಯಾವ ಪುರುಷಾರ್ಥವನು ಪಡೆದುದಾಯಿತು ಜೀವ ?
ಇತ್ತು, ಅವಕಾಶವಿತ್ತು ; ತಿಳಿವಿತ್ತು; ಬೆಳಕಿತ್ತು.
ಎದೆಯ ಹೊಸ್ತಿಲಿನಲ್ಲಿ ಕಾಯುತಿದ್ದನು ದೇವ,
" ಒಳಗೆ ಬರಲಪ್ಪಣೆಯೆ ? " ಎಂಬ ದನಿ ಕೇಳಿದರು
ಅದು ಬೇಡವಾಗಿತ್ತು.
" ಹೊತ್ತು ಹೋದಾಮೇಲೆ ಯಾರು ಬಲ್ಲರೊ ನಿನ್ನ ?
ಹೊತ್ತು ಹೋಗದ ಮುನ್ನ
ಮೃತ್ಯು ಮುಟ್ಟದ ಮುನ್ನ
ತೊತ್ತುಗೆಲಸವ ಮಾಡು........"
ಅದೋ ಮುಳುಗುತಿದೆ ಹೊತ್ತು ; ಈಗ ಅದು ಸೂಡು !
ಪಡುವಣದ ಚಿತೆಯಲ್ಲಿ ಹಗಲ ಹೆಣ ಉರಿಯುತಿದೆ
ನೋಡು ನೋಡು !

* * * * *

ಮುಸಿ ನಿರಾಸೆಯ ನಭದ ಮೇಲೆ ಕರಿಗೆರೆಗಳನು
ಬರೆದು ತಂತಿಯ ಕಂಬ ಸಾಲು ಸಾಲು ;

ತಲೆಗೆದರಿ ನಿಂತಿರುವ ಈಚಲಿನ ರೂಕ್ಷತೆಗೆ
ಹಿನ್ನೆಲೆಯ ರಚಿಸಿರಲು ಬೋಳು ಬಯಲು,
ದೂರ ದೂರದ ವರೆಗೆ
ಸಂಜೆ ಬಾನಿನ ಕೆಳಗೆ
ಮುಗಿವಿರದ ಪ್ರಶ್ನೆಯೊಲು ಮಲಗಿರುವ ಟಾರ್ ಬೀದಿಯಲ್ಲಿ
ಕೈ ಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ ಮುಂದೆ ಮುಂದೆ
ಹಿಡಿದ ಕೈ ಸಾಗುತಿದೆ ಹಿಂದೆ ಹಿಂದೆ!

ಗಡಿಯಾರದಡಿಯಲ್ಲಿ

ಎಂದಿನಿಂದಲೊ ಏನೊ ಒಂದೇ ಸಮನೆ ನಡೆಯುತ್ತಲಿದೆ
ಈ ಗಡಿಯಾರ,
ಸೆಕೆಂಡು, ನಿಮಿಷ, ತಾಸುಗಳ ತೋರುತ್ತ ತಿರುಗುತಿವೆ ಮುಳ್ಳು
ಹಗಲೂ ಇರುಳು ;
ಗಂಟೆ, ಅರೆಗಂಟೆಗೊಂದೊಂದು ಸಲ ಮೊಳಗಿದೆ ಕೊರಳು,
ನಾಳ ನಾಳಗಳಲ್ಲಿ ಮಂಜಿನುರುಳು !

ಮಳೆಯೊ ಬಿಸಿಲೋ ಮಂಜೊ, ಏನಾದರೇನಂತೆ
ಕಪ್ಪುಗಾಜಿನ ಒಳಗೆ ಚಲಿಸುತಿವೆ ನಕ್ಷತ್ರಗಣ
ನಿಶ್ಚಿಂತೆ—
ಎಡಬಿಡದೆ ಹೊಳೆ ಹರಿಯುತಿವೆ ಸಾಗರಕೆ ;
ಎಷ್ಟೊಂದು ಸಿಹಿನೀರ ಹೊಳೆ ಹರಿದರೂ ತೀರದಿದೆ
ಉಪ್ಪುಕಡಲಿನ ಕಪ್ಪು ಬಾಯಾರಿಕೆ !

ರುದ್ರಭೂಮಿಯ ತುಂಬ ಬೆಂದ ಬದುಕಿನ ಬೂದಿ,
ನೂರು ಗೋರಿಯ ಮೇಲೆ ಮೊಳೆವ ಹಸಿರು !
ಅರೆಮುರಿದು ನಿಂತಿರುವ ಕೋಟೆಕೊತ್ತಲಗಳಲಿ, ಹಳುಬೆಳೆದು
ತೊಗಲ ಬಾವಲಿ ರೆಕ್ಕೆ ಬಡಿವ ಸದ್ದು.
ನೆಲದೊಳೆಂದೋ ಹೂತು ಹಾಳಾದ ನಗರಗಳ ಅಗೆದು
ಅವಶೇಷಗಳ ತೆಗೆವ ಪ್ರಾಚ್ಯ ಸಂಶೋಧಕರ
ಗುದ್ದಲಿಯ ಸದ್ದು !

ನಟ್ಟನಡುರಾತ್ರಿಯಲಿ ಎದ್ದು ಕುಳಿತನು ಇವನು ;
ಭೋರ್ಗರೆದಿತ್ತು ಇರುಳಿನ ಹೊನಲು—
ಕಪ್ಪು ಮಡುವಿನ ಒಳಗೆ ಮೊಸಳೆ ಹಲ್ಲಿನ ಮಸೆತ :
ಟಿಕ್, ಟಿಕ್, ಟಿಕ್....
ಕೈಗಡಿಯಾರ ತಲೆದಿಂಬಿನಲಿ ಮಿಡಿಯುತಿದೆ,
ಎದೆ ನಡುಗುತಿದೆ !

ಕೋಳಿ ಕೂಗಿತು ; ಬೆಳಗು ಕರೆಯಿತು ಗಾಳಿ ಸಂಚಾರಕೆ.
ಚಿಗುರು ಹೂ ಹೀಚುಗಳ ಹಾದಿ ಮುಗಿಯಿತು ಇನ್ನು,
ಮುಂದೆ ಕಾಣುತ್ತಲಿದೆ ಬೋಳುಮರಗಳ ರಸ್ತೆ,
ಅತ್ತಿತ್ತ ಅಸ್ಥಿಪಂಜರ ನಿಂತು ಕೊಡುವ ಗೌರವ ರಕ್ಷೆ;
ಉದುರಿದೆಲೆಗಳ ತುಳಿದು ನಡೆದು ಬಂದನು ಇವನು,
ಕಾಣಿಸಿತು ಅರುವತ್ತನೆಯ ಮೈಲಿಕಲ್ಲಿನ ನೆರಳು !

ಕೈಕೋಲ ಮೂಲೆಯೊಳಿಟ್ಟು ನಿಲುವುಗನ್ನಡಿಯೆದುರು
ಬಂದು ನಿಂತ.
ತಲೆತುಂಬ ಮಾಗಿಯ ಮುದ್ರೆ ; ಕಮರಿದ ಕೆನ್ನೆ ; ಮಾಸಿದ ಕಣ್ಣು ;
ತನ್ನದೇ ಈ ಚಿತ್ರ !
ಗೋಡೆಯ ಮೇಲೆ ತೂಗುತಿದೆ ಹರೆಯಗಳ ಹೊಂಬಿಸಿಲ
ಹಿಡಿದು ತೆಗೆಸಿದ ಫೋಟೊ.
ಆದರ ಮೇಲೇ ತೂಗುತಿದೆ ಈ ದೊಡ್ಡ ಗಡಿಯಾರ--
ಟಿಕ್—ಟಿಕ್—ಟಿಕ್....

*　　*　　*　　*

ಕನ್ನಡಿಯೆದುರು ಒಂದೊಂದೆ ಬೆಳ್ನವಿರ
ಹಿಡಿದು ಕೀಳುವ ಚಪಲ ;
ಇಲ್ಲ, ಅಂಗಡಿಯಿಂದ ಕಪ್ಪು ಬಣ್ಣವ ತಂದು
ಬಳಿದು ಕಪ್ಪಗೆ ಮಾಡಿ, ಬೈತಲೆ ತೆಗೆದು
ಹಳೆಯ ಸೂಟನು ಮತ್ತೆ ಇಸ್ತ್ರಿಮಾಡಿ
ತೊಟ್ಟು ಪೇಟೆಯ ತುಂಬ ಅಲೆವ ಬಯಕೆ.
ನಡುಮನೆಯಿಂದ ರೇಡಿಯೋ ದನಿ ಕೇಳಿಸಿತು :
‘ ಭಜ ಗೋವಿಂದಂ ಭಜ ಗೋವಿಂದಂ
ಭಜ ಗೋವಿಂದಂ ಮೂಢಮತೇ ....’

ಕುಸಿದು ಕುಳಿತನು ಕುರ್ಚಿಯಲಿ ಚಿಂತಾಕ್ರಾಂತ,
ಗಡಿಯಾರಗಳ ದನಿಗೆ ಕಿವಿಯು ಮುಚ್ಚಿ.
ಮನೆಯೊಳಗಿಂದ ಪುಟ್ಟ ಮೊಮ್ಮಗು ಬಂತು,
ಸಕ್ಕರೆಯ ತೊದಲಿಂದ 'ಅಜ್ಜ' ಎಂದಿತು ಒಮ್ಮೆ.
ಮುಂಬೆಳಗಿನೆಳೆಬಿಸಿಲು ಸಂಜೆಬಾನಿಗೆ ಬಿತ್ತು !

ಒಂದು ಚಿತ್ರ

ಯಾರು ಕೊಟ್ಟರೋ ಬಾನಿಗೊಂದು ಬಂಗಾರದ ಮೆಡಲು!
ಸಂಜೆ ಬೆಳಕಿನಲಿ ಸಾಲು ಗುಡ್ಡಗಳು
ಅನಂತತೆಯ ತೊದಲು!
ತೆಂಗು ಅಡಕೆಗಳು ಜಿರಾಫೆ ಕೊರಳನು
ಮೇಲಕೆತ್ತಿ ನಿಲಲು,
ಪುಟ್ಟಕೈಗಳನು ನಭಕೆ ಚಾಚಿ ಮಗು
ಚಿಕ್ಕೆಗಣ್ಣ ತೆರೆದು
"ಚಂದು ಮಾಮ ಬಾ"—ಎನ್ನುತಿಹುದದೋ
ತನ್ನ ತಾನೆ ಮರೆತು!

ಭವ್ಯ ದೈನ್ಯ*

ಅರುಣ ನಭವನು ಹೊದ್ದು ಬಂದು ನಿಂತಿದೆ ಇದೆಕೊ
ಭವ್ಯ ದೈನ್ಯ!
ಕೈಯ ಕಿರಣವ ಚಾಚಿ ಕೇಳುತಿದೆ :
‘ ಭವತಿ ಭಿಕ್ಷಾಂದೇಹಿ ’

ಮುಗಿಲೆ ಬಂದೀ ತೆರದಿ ನೆಲವ ಬೇಡುವುದುಂಟೆ!
ಹೆಗ್ಗಡಲು ಹನಿಯೆದುರು ಕೈಯ ಚಾಚುವುದುಂಟೆ!
ನೇಸರೇ ಹಣತೆಯೆಡೆ ಬೆಳಕ ಬೇಡಿದ್ದುಂಟೆ!
ನಡುಗುತಿದೆ ಉಡುಗುತಿದೆ ಮಣ್ಣ ಹೆಂಟೆ.

ಅಕ್ಕರೆಯ ಸಕ್ಕರೆಯ ಮುದ್ದು ಮಗುವನು ತಬ್ಬಿ
ಕಣ್ಣೆತ್ತಿ ನಿಂತಿಹಳು ತಾಯಿ ಪೃಥುವೀ.
ಯಾರವರು ?
ಅರಮನೆಯ ಹೆಬ್ಬಾಗಿಲನು ಮೀರಿ ಬಳೆಬಳೆದು ನಿಂತವರು!
ಕೊಡುವ ಮೊದಲೇ ಕೊಂಡು ಕೈ ಚಾಚಿ ನಿಂದವರು!
ಸೂರ್ಯತೀರ್ಥದಿ ಮಿಂದು ವೈಶಾಖ ಪೂರ್ಣಿಮೆಯ
ಹಾಲ್ಗಡಲ ಹಾದಿಯಲಿ ನಡೆದು ಬಂದವರು!

ಅಕ್ಕರೆಯ ಸಕ್ಕರೆಯ ಮುದ್ದು ಮಗುವನು ತಬ್ಬಿ
ಕೊರಳೆತ್ತಿ ನಿಂತಿಹಳು ತಾಯಿ ಪೃಥುವೀ—
ಓ ಅಲ್ಲಿ, ಮೇಲೆ, ಇನ್ನೂ ಮೇಲೆ
ಮುಗಿಲಲ್ಲಿ ರಾಜಿಸಿದೆ ಕರುಣೆಯೇ ಮಡುಗೊಂಡ
ಮುಖ ಮಂಡಲ!
ಕಣ್ಣೊ ತಿಂಗಳ ಬಿಂಬ, ನಿಲುವೊ ದೀಪಸ್ತಂಭ;
ಕಾಲಡಿಯ ನೆರಳಲ್ಲಿ ಭೂಮಂಡಲ!

---

* ಅಜಂತಾವರ್ಣಚಿತ್ರ ‘ ತಾಯಿ–ಮಗು ’ ಎಂಬುದರಿಂದ ಪ್ರೇರಿತ.

ಕಂಡದ್ದು ಮೂರುಸಲ

[ಗಾಂಧೀ ಜಯಂತಿ—೧೯೫೭]

ಒಂಬತ್ತು ವರುಷಗಳೀಚೆ ನಿಂತು ನೋಡುವೆ ನಾನು—
ನಿನ್ನ ಆ ಮೇರುಸಮ ಧೀರವ್ಯಕ್ತಿತ್ವವನು.
ಮುಗಿಲ ಗೋಡೆಗೆ ಅದಿಗೊ ತೂಗುಬಿಟ್ಟದೆ ನೋಡು
ಬರೆದಿಟ್ಟ ಚಿತ್ರಪಟ,
ಮೇರುದಂಡದ ತುದಿಗೆ ಹಾರುತಿದೆ ಬಾವುಟ,
ನೆಲ ಕಡಲು ಜನಪದದ ಬದುಕೆಲ್ಲ
ಜೀವಂತ ಭೂಪಟ.
ಹಿಮಶೈಲ ಶಾಂತಿಯಲಿ ಜ್ವಲಿಸುತಿದೆ ಇದೋ
ಎದೆಯ ದೇಗುಲದಲ್ಲಿ ನಿತ್ಯನಂದಾದೀಪ
ನಿನ್ನ ರೂಪ!

* * * * *

ಕಂಡದ್ದು ಮೂರುಸಲ ನಾ ನಿನ್ನ:
ಮೊಟ್ಟಮೊದಲದೊ ಅಲ್ಲಿ,
ಹರೆಯದರಮನೆಯಲ್ಲಿ.
ತುಮುಲದ ಕಡಲು ನಿನ್ನೊಡಲು;
ತೆರೆಯಮೇಲಾಡಿತ್ತು ಹೊನ್ನಹರೆಯದ ಬಿಸಿಲು.
ಅಂತರ್ನಿಭದಿ ಮೊದಲಾಗಿತ್ತು
ಸದಸತ್ತುಗಳ ಗುಡುಗು.
ಸಂಶಯದ ಕಡಲಿನಲಿ ನೂರು ಪ್ರಶ್ನೆಯ ಹಡಗು!

ರುಗ್ಣಶಯ್ಯೆಯಲಿ ಮಲಗಿರಲು ತಂದೆ
ಹುಡುಗ ನೀ ಬಂದೆ.
ಕೈಯೊಳಗಿತ್ತು ತಪ್ಪೊಪ್ಪಿಗೆಯ ಪತ್ರ—
ತಂದೆಗೊಪ್ಪಿಸಿ ಕುಳಿತೆ
ಹೊಯ್ದಾಡಿತ್ತು ಕಣ್ಣಿನ ಹಣತೆ.

ಕರಗಿತ್ತು ಕರುಣೆಯ ಮೇಘ ;
ಹನಿಹನಿಯಾಗಿ ಜಿನುಗಿತ್ತು ತಂದೆಯೆದೆ-
ಯಿಂದಿಳಿದ ಕಂಬನಿಯ ಹರ್ಷವರ್ಷಘೋಷ!
ಕಂಡಿತಾ ಕಂಬನಿಯ ಬೆಳಕಿನಲಿ ನಿನ್ನ ಜೀವನ ಮಂತ್ರ.
ಎದೆಯ ಕೊಳೆ ತೊಳೆದು ನೀ ನಿಂತೆ ನಿರ್ಮಲನಾಗಿ
ಯಜ್ಞ ದೀಕ್ಷಿತನಾಗಿ!

* * * * *

ಮತ್ತೆ ಎರಡನೆ ಬಾರಿ, ನಾ ಕಂಡೆ ನಿನ್ನನಾ
ಆಫ್ರಿಕದ ಕಗ್ಗತ್ತಲಲ್ಲಿ:
ನಟ್ಟನಡುವಿರುಳಲ್ಲಿ ಎಸೆದು ನಡೆಯಿತು ರೈಲು
ಯಾವುದೋ ನಿಲ್ದಾಣದಲ್ಲಿ.
ಹಾಸುಗಂಬಿಯಮೇಲೆ ಉರುಳಿಹೋದುವು ರೈಲು
ಆ ಇರುಳೆಲ್ಲ, ಮೈಲು ಮೈಲು.
ಏನು ? ಮುಂದೇನು ?
ಪ್ರಶ್ನೆಗಳ ಹೆಡೆಯನೆತ್ತಿತು ಬಾನು :
“ ಗಂಡುಸಾದರೆ ನಿನ್ನ ಬಲಿಗೊಡುವೆಯೇನು ? ”
ಮೊಳಗಿತ್ತು ನಿರ್ಧಾರ
ಹುತ್ತ ಬೆಳೆಯಿತು ಪೂರ.
ಛಳಿ ; ಕೊರೆವ ಛಳಿಯಲ್ಲಿ ಕುಳಿತನು ಬುದ್ಧ
ನಡುಗುಚಿಕ್ಕೆಯ ಇರುಳ ಮರದ ಕೆಳಗೆ.
ಆಫ್ರಿಕದ ಕಗ್ಗತ್ತಲೆದೆಯಲ್ಲಿ ಹೊಳೆದಿತ್ತು
ಭಾರತಿಯ ಬಿಡುಗಡೆಯ ಬೋಧಿ !

ಎದ್ದೆ—
ಮೈತುಂಬಿ ಎದ್ದೆ, ವಿದ್ಯುತ್ ತರಂಗವಾಗಿ ಬೀಸಿದೆ ನೀನು
ಹಿಮಾಲಯದಿಂದ ಕನ್ಯಾ-
ಕುಮಾರಿಯ ತನಕ ಪ್ರಚಂಡವಾಗಿ!

ಏರಿದುವು, ಹಾರಿದುವು, ಬಣಗು ತೃಣಕಣವೆಲ್ಲ
ಬ್ರಹ್ಮಾಸ್ತ್ರವಾಗಿ.
ಮಣ್ಣ ಕಣಕಣವೆಲ್ಲ ಮೈದುಂಬಿ ಕೂಗಿತ್ತೊ ಕೊರಲಲ್ಲಿ:
" ಕ್ವಿಟ್ ಇಂಡಿಯಾ...."

ಹೂವಿನ ಹಿಡಿಗೆ ಕಬ್ಬಿಣವೆಲ್ಲ ಕರಗಿ ನೀರಾಯ್ತು!
ಕೆಂಪು ಬಾವುಟವಿಳಿದು, ತಂಪು ಬಾವುಟವೇರಿ
ಬಾನು ಬೆಳಗಾಯ್ತು.
ಕಡಲ ನೀಲಿಯನೀಸಿ ಸಾಗಿಹೋದವು ನೂರು
ಕೊಕ್ಕರೆಯ ಹಡಗು.
ಜೇಡಬಲೆ ಮೋಡಗಳ ಗುಡಿಸಿ ಕಳೆಯಿತು ಗಾಳಿ;
ಪಾಚಿಗಳೆದಾ ಕೊಳದಿ ಹೊಳೆವ ಮೀನಿನ ಕೇಳಿ;
ಗುಡಿ ಗುಡಿಯ ಘಂಟೆಯಲಿ ಹೊಮ್ಮಿತ್ತು ಜಯಘೋಷ,
ಇರುಳ ಹೊಂಗನಸೆಲ್ಲ ನನಸಾಗಿ
ಜನತೆಯ ತೇರು ಸಿಂಗರವಾಗಿ
ಮೊದಲಾಯ್ತು ಹೊಸ ಯುಗದ ಜಾತ್ರೆ.
ಜಾತ್ರೆಯುತ್ಸಾಹದಲಿ ನಿನ್ನ ನಾ ಮರೆತೆ!

* * * *

ಮತ್ತೆ ಮೂರನೆಬಾರಿ, ನಾ ಕಂಡೆ
ಸ್ವತಂತ್ರ ಭಾರತದ ಜನಸಮುದ್ರದ ತಡಿಯ
ಪ್ರಾರ್ಥನಾ ಶೈಲದಲಿ.
ಮೂರು ಸಿಡಿಗುಂಡುಗಳ ಪೂಜೆ ಸಂದಿತು ಎದೆಗೆ.
ಪಂಜರ ಬಿರಿದು, ರಾಮರಾಮಾ ಎಂದು
ಹಕ್ಕಿ ಹಾರಿತು ಹೊರಗೆ,
ತನ್ನ ಮನೆಗೆ.
ಶಿಲುಬೆಯಲಿ ಕ್ರಿಸ್ತನಿನ್ನೂ ನಿಂತು ಹೇಳುವ ಮಾತು

ಕೇಳಿತು ಕಿವಿಗೆ : ‘ ಕ್ಷಮಿಸು ತಂದೇ ಕ್ಷಮಿಸು
ಇವರ ಕನಿಕರಿಸು.’
ನೊಂದು ನುಡಿದಿತ್ತು ಕವಿವಾಣಿ :
‘ ಮತ್ತೆ ಇದೇನು !
ಎಂದೆಂದಿಗು ನಿನಗಿದ್ದೆಗತಿಯೇನು ? ’
ನಾನೆಂದೆ : ‘ ಎಂದೆಂದಿಗು ನಮಗಿದ್ದೆಗತಿಯೇನು ? ’

*　　*　　*　　*

ಒಂಬತ್ತು ವರುಷಗಳೀಚೆ ನಿಂತು ನೋಡುವೆ ನಾನು,
ನೀ ತಂದ ಬೆಳಕಿನಲಿ ಖಿನ್ನನಾಗಿ.
ಮತ್ತೆ ಬಿದ್ದಿವೆ ಇದೋ, ಅಂದೆದ್ದ ತರಗೆಲೆ ಕಡ್ಡಿ
ದಿಕ್ಕುಪಾಲಾಗಿ.
ಅಲ್ಲೊಂದು ಇಲ್ಲೊಂದು ನಿಂತಿಹವು ದೀಪಸ್ತಂಭ
ನಿನ್ನ ಬೆಳಕನೆ ಹೊತ್ತು ಮುಡಿಯತುಂಬ !
ನಂಬಿರುವೆ : ಮೂಡಿಯೇ ಮೂಡುವುದು ಶಾಂತಿಸರ್ವೋದಯದ
ಚಂದ್ರಬಿಂಬ !

ನಗರದ ನಡುವೆ ಒಂದು ಬೆಳಗು

ಮನೆಯ ಬದಿಯಲಿ ಕರಿಯ ಹೆಬ್ಬಾವಿನಂದದೊಲು
ಮಲಗಿದ್ದ ಟಾರ್ ಬೀದಿಗೆಚ್ಚರವಾಯ್ತು ಮೊದಲು,
ಮೈಮೇಲೆ ಪೆಟ್ರೋಲು ಕಂಪಿನಾ ಹೊಗೆಯುಗುಳಿ
ಕಟುವಿಕಟ ರವಗೈದು ಓಡಿದಾ ಹಳೆಯ ಮೋ-
ಟಾರು ಕಾರಿಂದ! ಗಸ್ತುಹಾಕುತ ಬೀದಿಯಲಿ
ನಿಂತು ತೂಕಡಿಪ ಹೊಗೆ ಮಂಜುಗಳ ಭೂತ ಮೋ-
ಹರ ಬೆದರಿ ಮೋಟಾರು ಕಾರೆಸೆದ ಧೂಮಕ್ಕೆ,
ಮೈಮುದುರಿ ಓಡಿತ್ತು ಸಂದಿಗೊಂದಿಗಳೆಡೆಗೆ!

ಹೋಟಲಿನ ಕಾಫಿಯ ಕಂಪು ಮನೆಯ ಕಿಟಕಿಯಲಿ
ಒಳನುಗ್ಗಿ, ರಗ್ಗಿನಲಿ ಹೆಗ್ಗನಸುಗಳನುಣುವ
ಸಗ್ಗಿಗರನೆಬ್ಬಿಸಿತು ರೇಡಿಯೋ ದನಿಯಲ್ಲಿ!
ಸೂರ್ಯೋದಯವ ಕಂಡು ಪುಲಕಿಸಿತು ನಿಂತಿರುವ
ಹಿರಿಯ ಗಿರಿ! ಮಲಗಿಯೇ ಇತ್ತಿನ್ನು ಮನು ನಗರಿ
ಕನಸುಗಳ ಚಿಂದಿಯಲಿ ತನ್ನ ಕೊಳೆಮೈ ಮುದುರಿ.

ಮಬ್ಬಿನಿರುಳು

ಮಬ್ಬಿನಿರುಳು ದಬ್ಬುತಲಿದೆ ಹೇಗೊ ತನ್ನ ಕಾಲವ,
ಕುರುಡು ಮೋಡ ಹರಡುತಲಿದೆ ಬಾನ ತುಂಬ ಜಾಲವ.
ಬಾನ ಬಟ್ಟೆಗುಜ್ಜಿ ಉಜ್ಜಿ ಸವೆದ ಮುರುಕು ಸೋಪಿನಂತೆ
ತೆಳ್ಳಗಾದ ಚಂದಿರ,
ಮೈಲಿಗೆಯೊಳು ತೇಲುತಿಹನು ಕವಿದ ಹಾಗೆ ಮಂಪರ.

ಪುರಾತನದ ಮಹಲಿನಲ್ಲಿ ಬಲೆನೇಯುವ ಜೇಡದಂತೆ
ಮಬ್ಬು ಬೆಳಕು ಹಬ್ಬುತಿರಲು, ಗಿಡಮರಗಳ ರೂಕ್ಷ ಚಿಂತೆ
ತಲೆಯ ಕೆದರಿ ಗಾಳಿ ಹೊಳೆಯೊಳೀಜಿ ಈಜಿ ಸೋಲುತಿರಲು,
ಮುಗಿಲು ಉಗಿವ ಎಂಜಲಂತೆ ಸೋನೆಯ ಮಳೆ ಸಿಡಿಯುತಿರಲು,
ನಿಲುವುದೆಂದೊ ನಿಲುವುದೆಂದೊ ಭೂತದ ಮನೆ ನೆರಳ ಪಾತ್ರ
ಕೆಸರ ಹಜ್ಜೆ ಕೇಳಿಕೆ,
ಬೆಳಗು ಬಂದು ನಿಲಿಸಬಹುದೆ ಸಲಿಸಿ ತನ್ನ ಕಾಣಿಕೆ?

ಮಬ್ಬಿನಿಂದ ಮಬ್ಬಿಗೆ

ಆರುಗಂಟೆಯ ಮೊಳಗು :
ಮೂಡಣದ ಹೆರಿಗೆಮನೆಯಲ್ಲಿ ಸಡಗರವೊ ಸಡಗರ ;
ಕತ್ತಲಿನ ಬಸಿರು ಬೆಸಲಾದ ಬಂಗಾರ ಮೋರೆಯ ಕುವರ –
ಬಂದ,
ಉಲ್ಲಾಸಗಳ ತಂದ.

ಜೋಯಿಸರು ಪಂಚಾಂಗವನು ತಿರುವಿ,
ಸಕಲಗ್ರಹಬಲಸ್ಥಿತಿಯ ನೋಡಿ, ಕುಂಡಲಿ ಬರೆದು
ಮರಳಿದರು ಮನೆಗೆ.

ಅಂಬೆಗಾಲಿಟ್ಟು ಹೊಸಿಲು ದಾಟಿತು ಬಿಸಿಲು—
ಬಾಗಿಲಲಿ ಹಾಲ್ ಕರೆವ ಹಸುಕೊರಳ ಗಂಟೆದನಿ,
ತುಂಬು ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದು ಕರು,
'ಕಾ' ಎನುವ ಕಾಗೆ, ಚಿಲಿಪಿಲಿ ಗುಬ್ಬಿ, ಬಾಲವಾಡಿಪ ನಾಯಿ ;
ಸೋಜಿಗದ ಹೊನಲು.

ಏಳು ಗಂಟೆಯ ಮೊಳಗು :
ಏಳರಿಂದ ಎಂಟರತನಕ ಸದಾ
ಮಲ್ಲಿಗೆಯ ಮಳೆಗರೆವ ಕಣ್ಣು ಎರಡೇ ಎರಡು
ಮೇಲ್ ಮುಗಿಲಲ್ಲಿ,
ಕೆಳಗೆ ಹಸುರು ಸೆರಗಿನ ಮೆತ್ತೆ ;
ಈ ನಡುವೆ ಬಾಯಿಟ್ಟು ಸೀಪಿದಾಗೆಲ್ಲ ಹಾಲನು ಸುರಿವ
ಚಂದ್ರ ಕುಂಭಗಳೆರಡು,
ಎಂದು ಯಾವಾಗಲೂ ಗಕ್ಕನೆಯೆ ನಿಂತು ಕೈಕೊಡದ ನಲ್ಲಿ
ತುಟಿಯ ಬಟ್ಟಲಿನಲ್ಲಿ !

ಎಂಟು ಗಂಟೆಗೆ ಅದಿಗೊ ಉಗುರು ಬೆಚ್ಚಗೆ ಬಿಸಿಲು—
ಸುತ್ತ ಮರಗಿಡಗಳಲಿ ಲಾಲಿ ಹಾಡುವ ಹಕ್ಕಿ.

ಮರದ ಬೊಂಬೆಗೂ ಜೀವ ಬಂದಿದೆ ; ಕಲ್ಲು ಹರಳುಗಳೆಲ್ಲ
ಚಿನ್ನ—ರನ್ನ !
ಆ, ಅಗೊ, ಕರೆಯುತಿದೆ ಪಾಠಶಾಲೆಯ ಗಂಟೆ,
ಸ್ಲೇಟು ಪುಸ್ತಕವನ್ನು ಹೆಗಲಿಗೇರಿಸು, ಹೊರಡು ;
ಅಲ್ಲಿ ಕಾದಿದ್ದಾರೆ ' ಮೇಸ್ಟ್ರು '.
ತಿದ್ದು ' ಅ ಆ ಇ ಈ ' ; ಮಗ್ಗಿಯೊಪ್ಪಿಸು ; ' ಆಟ ಊಟ ಓಟ.'
ಮೆಲ್ಲನೆಯೆ ಜಾರುತಿದೆ ಬೆಳಗು ಬಿತ್ತಿದ ಮಾಟ.

*   *   *   *

ಹನ್ನೊಂದರಿಂದ ಹನ್ನೆರಡು :
ಜಂತೆ ಜಂತೆಯ ತುಂಬ ಜೇನುಗೂಡು !

ಕಂಡ ಕಂಡುದನೆಲ್ಲ ಗುದ್ದುತಿದೆ ಮರಿಗೂಳಿ ;
ಹಗಲಿರುಳು ಮಗ್ಗದಲಿ ಜೊನ್ನಗನಸಿನ ಲಾಳಿ
ಕದಡು ನೀರಿನ ಕೊಳದಿ ಮುಖದ ನೆರಳನು ನೋಡಿ
ಕ್ರಾಪು ತಿದ್ದುವ ಚಾಳಿ
ಎದೆ ತುಂಬ ಮೊರೆಯುತಿವೆ ಹತ್ತು ದಿಕ್ಕಿನ ಗಾಳಿ !

ತುಂಬಿದೂರಿನ ನಡುವೆ ಗೋಪುರದ ಗಡಿಯಾರ—
ಕಾದ ಬಿಸಿಲಿನ ಎದೆಗೆ ಒಂದು ಗಂಟೆಯ ಬಡಿತ.
ದೂರದಲಿ ಹಸಿರು ಚಪ್ಪರದೊಳಗೆ ಮದುವೆ ಬ್ಯಾಂಡಿನ ಮೋಡಿ,
ಮೈತುಂಬ ಹೂ ಮುಡಿದು ಹುಚ್ಚಾದ ಮರ ಚೈತ್ರದಲಿ
ಮೆರವಣಿಗೆ ಹೊರಟು ನಿಂತಿವೆ ನೋಡಿ.
ಚಿಕ್ಕೆ ಚಿಕ್ಕೆಗೆ ಒಂದು ಉಯ್ಯಾಲೆಯನು ತೂಗಿ
ದಿಗ್ದಿಗಂತದ ನೀಲ ಗಾಜುಗೋಡೆಗೆ ತಾಗಿ
ಜೋಕಾಲಿಯಾಡುವ ಬಯಕೆ—
' ನಾ ನಿನಗೆ ನೀನೆನಗೆ ಜೇನಾಗುವಾ
ರಸ ದೇವ ಗಂಗೆಯಲಿ ಮೀನಾಗುವಾ.'

*   *   *   *

ಒಂದು, ಎರಡು, ಮೂರು—
ಬಾರಿಸಿತು ಗಡಿಯಾರ ತನ್ನ ಪಾಡಿಗೆ ತಾನು.
ಅಯ್ಯೊ, ಯಾವಾಗ ಈ ಮುಳ್ಳು ಒಂದು ಎರಡನು ದಾಟಿ ಮೂರಕ್ಕೆ
ಬಂದಿತೋ,
ಹಿಡಿದುಕೋ, ಅಲ್ಲೆ ಆ ಗಡಿಯಾರಗಳ ಮುಳ್ಳ, ಭದ್ರ ;
ಬಿಡಬೇಡ ಮುಂದಕ್ಕೆ ಕೊಂಚ ಕಾಲ.
ಗಡಿಯಾರ ನಕ್ಕಿತ್ತು 'ಎಂಥ ಚಪಲ !'

ಆಷಾಢದಾಗಸದ ಗಾಳಿ ಪಟಗಳ ಮೇಲೆ ವಿರಹಿ ಯಕ್ಷನ ಸುಯ್ಲು ;
ಶ್ರಾವಣದ ಮಳೆ ಬಿಸಿಲು ; ಗದ್ದೆಯಲಿ ತೆನೆದೂಗುತಿವೆ ಪೈರು ;
ನೀಲಿಯಂಗಳದಲ್ಲಿ ಮೋಡಮಕ್ಕಳ ಕೇಕೆ.
ಬಿಳಲು ಬಿಡುತಿದೆ ವೃಕ್ಷ, ಟೊಂಗೆ ಟೊಂಗೆಯ ತುಂಬ
ಹಕ್ಕಿ ತೊಟ್ಟಿಲ ಕಟ್ಟಿ ಜೋಗುಳವ ಹಾಡುತಿವೆ ;
ಮೈಗೆ ಹೆಣೆದಿವೆ ಬಳ್ಳಿ ಅಲ್ಲಿಂದ ಇಲ್ಲಿಂದ ;
ಆಗಾಗ ಒಮ್ಮೊಮ್ಮೆ ಬಂದು ಕಾಡಿದೆ ಪ್ರಶ್ನೆ :
' ನಾ ಬಂದುದೆಲ್ಲಿಂದ ? '

* * * *

ಗಂಟೆ ಹೊಡೆಯಿತು ನಾಲ್ಕು :
ಟೆನ್ನಿಸ್ಸಿನಾಟದಲಿ ಏನೊ ಬಳಲಿಕೆ, ಸುಸ್ತು ;
ಮಹಡಿ ಮೆಟ್ಟಿಲನು ಹತ್ತುವಾಗಲು ಕೂಡ ಎಂದಿಲ್ಲದಾಯಾಸ ;
ಜಂತೆಯಲಿ ಗೂಡು ಕಟ್ಟಿದ ಜೇನು ಹಾರಿಹೋಗಿವೆ, ಈಗ
ತೂಗುತ್ತಲಿವೆ ಖಾಲಿ ಗೂಡು.
ಅಲ್ಲಲ್ಲಿ ಜೇಡಬಲೆಗಳ ಜಾಲ, ಸುಣ್ಣ ಬಣ್ಣವ ಬಳಿದ ಗೋಡೆಯಲ್ಲೂ ಕೂಡ
ಸುಕ್ಕು, ತರಕಲು, ಬಿರುಕು ;
ಛಾವಣಿಯ ಹೆಂಚು ಮಳೆ ಬಿಸಿಲು ಗಾಳಿಯಲಿ ಉದುರಿ
ಈಗೀಗ ಜಿನುಗುತಿದೆ ಮಾಗಿ ಮಂಜಿನ ಸೋನೆ.

ಆಗಾಗ ಸುಣ್ಣಬಣ್ಣವ ಹೊಡೆದು ರಿಪೇರಿ ಮಾಡಿದರೆ
ಇನ್ನರ್ಧ ಶತಮಾನ ಗ್ಯಾರಂಟಿ.
ತೂಬನೆತ್ತಿದರೇನಂತೆ ಬಿಡು, ಆ ನೀರಗಂಟೆ.

* * * *

ನಿಷ್ಕರುಣ ಗಡಿಯಾರ—
ಮುಳ್ಳು ನಾಲ್ಕನು ದಾಟಿ ಐದನೂ ಮುಟ್ಟಿ ಮುಂದೆ ಸಾಗುತ್ತಲಿದೆ.
ಸೂರ್ಯನ ಶಾಖ ಕಡಿಮೆಯಾಗುತ್ತಲಿದೆ ದಿನದಿನಕೆ;
ಬಾನ ನೀಲಿಗೆ ಹೊಳಪು ಸಾಲದು; ನೀರಿನಲಿ ರುಚಿಯಿಲ್ಲ;
ಏನು ಕಾಲವೊ ಏನೊ.

ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ.
ಮನೆಯಂಗಳದ ಮಬ್ಬು ಬೆಳಕಿನ ನಡುವೆ ತಡವರಿಸುತಿವೆ ಕಣ್ಣು.
ಮಹಡಿ ಮೆಟ್ಟಿಲ ಮೇಲೆ ಯಾರ್ಯಾರದೋ ಹೆಜ್ಜೆ.
ಗೋಡೆ ಗಡಿಯಾರದಲಿ ಗಂಟೆ ಹೊಡೆದಿದೆ ಏಳು—
ಅದೊ ಕೇಳು,
ಯಾರೊ ಬಡಿಯುತ್ತಿದ್ದಾರೆ ಬಾಗಿಲ ಹೊರಗೆ
ಒಂದೇ ಸಮನೆ—
ಏಳು, ಬಾಗಿಲನು ತೆಗೆ, ಹೆದರದಿರು ಕೊನೆಗೆ.

ಪ್ರಶ್ನೆ

ಇಷ್ಟಗಲ ಬಾಗಿಲನು ತೆರೆದು ನಡೆದನೆ ಅವನು—
ಈಗೆಲ್ಲಿಗೆ?

ಇಂದಿಗೂ ಕಂದದಿವೆ ಎಂದೊ ಮುಡಿಸಿದ ದೀಪ.
ಶಿಲ್ಪ ಶಾಲೆಯ ತುಂಬ, ಮುಗಿದ, ಅರೆಮುಗಿದ,
ಮುಗಿಯದ ಮತ್ತೆ ಮುರಿದೆಸೆದ ನೂರಾರು ರೂಪ!
ಬೆಂಕಿಯುಳಿ ಕಡೆದು ನಿಲಿಸಿದೆ ಇದೆಕೊ, ತಂಪಾಗಿ,
ಚಿಗುರು ಹೂ ಪಕಳೆಗಳ ದೀಪಾವಳಿಯ ತೂಗಿ
ಕೊಂಬೆ ಕೊಂಬೆಯಲಿ.

ನೀಲಿಯ ವೀಣೆ ಮಿಡಿಯುತಿದೆ ನೂರಾರು
ಮೇಘರಾಗಗಳನ್ನು; ಗಾಳಿಗೋವಳಿಗ
ಜಗ್ಗುವನು ಮುಗಿಲ ಕೆಚ್ಚಲುಗಳನು; ಹಾಲು
ಧಾರಾಕಾರ ಹಸುರುಗದ್ದೆಯ ಸಸಿಗೆ.
ಹೀಗೆಯೇ ಸಾಗುತ್ತಲಿದೆ ಈ ಸೋಜಿಗದ ಮೆರವಣಿಗೆ!
ಆದರೂ—
ಇಷ್ಟಗಲ ಬಾಗಿಲನು ತೆರೆದು ನಡೆದನು ಎಲ್ಲಿ,
ಈ ಹೊತ್ತಿನಲ್ಲಿ!

* * * *

ಇಷ್ಟಗಲ ಬಾಗಿಲನು ತೆರೆದು ಬಂದನೆ ಇವನು—
ಯಾ ಹೊತ್ತಿನಲ್ಲಿ!
ಕಣ್ಣು ಕಾಣದ ಕದವ ತಳ್ಳಿ ಬಂದ
ಈ ಅಂಬೆಗಾಲಿನ ಕಂದ!

ಈ ನದಿಯ ಮೂಲವನು ನೀನು ಕಂಡೆಯ ಚಿಣ್ಣ?
ಹೊನ್ನ ತೀರ್ಥದಿ ಮಿಂದ ಮೈಗೆ ಬೆರಗಿನ ಬಣ್ಣ!
ಇವ ತೆರೆದ ಬಾಗಿಲಿಂದೊಳಗೆ ನುಗ್ಗಿತು ಹಿಗ್ಗು;

ವಾತ್ಸಲ್ಯ ವೀಣೆಯಲಿ ಬೆಳಕು ಬೆರಳಾಡಿಸಿತು,
ತೆರೆದ ತಾವರೆಗೊಳದಿ ಮೆಲುಗಾಳಿಯಾಡಿತ್ತು
ಎಲ್ಲ ಪ್ರಶ್ನೆಗು ಅದೇ ಒಂದೆ ಉತ್ತರವಾಯ್ತು !

ಸುತ್ತ ಗಿಡ ಬಳ್ಳಿಗಳ ತುಟಿಯೊಳಗೆ ಮಿನುಗಿತ್ತು
ಮೊದಲ ಮೊಲೆ ಹಾಲು ;
ಬಾನ ನೀಲಿಗೆ ತುಡಿವ ನೆಲದ ಬಯಕೆಯ ಬುಗ್ಗೆ
ಹಸುರಾಗಿ ಚಿಮ್ಮಿರಲು, ಕೊಂಬೆದೊಟ್ಟಿಲ ತುಂಬ
ಉಯ್ಯಾಲೆಯಾಡಿತ್ತು ಹಕ್ಕಿಗೊರಳು !

ಬಂದ ಕಂದನ ಜೊತೆಗೆ ಬದುಕಿದ್ದನು ತಂಪಾಗಿ,
ಚಿಕ್ಕೆ, ಚಂದಿರ, ಬುಗುರಿ ಚಂಡಾಟಗಳ
ಸಂಗದಲಿ ನೆಮ್ಮದಿಯಾಗಿ.
ಎಲ್ಲಿಂದಲೋ ಏನೊ ಬೀಳತೊಡಗಿತು ನೆರಳು
ಮಣ್ಣಿನುರುಳು.
ಬೆಳೆಬೆಳೆದು ಬಳಬಳಸಿ ಬಂತು ಗ್ರಹಣದ ಮಾಟ,
ಬಣ್ಣದೆಲೆಗಳು ಉದುರಿ, ಸೊರಗಿತ್ತು ಚಂದ್ರನ ತೋಟ.
ಬಿದ್ದ ನೆರಳಿನ ತುಂಬ ರೈಲು ಮೋಟರು ಮಿಲ್ಲುಗಳ —
ಧೂಳು ಹೊಗೆ ; ಮಾದಕದ ಬಿಸಿ ಗಾಳಿ ; ರೇಡಿಯೋ ಕಿರುಚು ;
ಝುಣರೆನುವ ಬಳೆಯ ದನಿ ; ಮೀನು ಮೈನುಣುಪುಗಳ
ಜಾರು ಬಂಡೆಯ ದಾರಿ—ಕಪ್ಪು ಕೊಳಕೆ !

* * * *

ಇಷ್ಟಗಲ ಬಾಗಿಲನು ತೆರೆದು ಬಂದಿತು ಪ್ರಶ್ನೆ :
ಕತ್ತಲಿನ ಕೊಳದಲ್ಲಿ ಇಳಿದ ಮಿಂಚಿನ ಮೀನು !
ಕಾಳಿಂದಿಮಡುವಿನ ನಿದ್ದೆ ಕಲಕಿತು ; ನಾಗದೆಪ್ಪುಗೆಯಿಂದ
ಮೇಲೆದ್ದು ಕೇಳಿದೆ :
‘ ಏನು ? ಏನಾಗಬೇಕು ’?

‘ ಮೂರು ಅಡಿ, ಮೂರೇ ಮೂರು ಅಡಿ ನೆಲವ ನೀಡುವೆಯೇನು,
ಮೂರೇ ಮೂರು ಅಡಿ ?’
‘ ಅಷ್ಟೆ ತಾನೇ, ತೆಗೆದುಕೋ, ಕಲಕದಿರು ಮತ್ತೆ.’
ನುಡಿದದ್ದೆ ತಡ, ಮೆಟ್ಟಿತ್ತು ಮಂದರ ಪಾದ ;
ಹೆಡೆಹೆಡೆಯು ತುಳಿತುಳಿದು ನಡೆಸಿತ್ತು
ತಾಂಡವವ.
‘ ಸಾಕೊ ಪಾಪೀ ಸಾಕು, ನಡೆ ; ಕೊಟ್ಟ ದಾನವ ಮರಳಿ
ಪಡೆಯುವೆ ನಾನು/ಓ ವಿಲಯಮೂರ್ತಿ.
ಇರಲಿ, ಆ ಬಲಿಚಕ್ರವರ್ತಿಗೇ ಇರಲಿ
ನೀ ತುಳಿದ ಅಮರ ಕೀರ್ತಿ.’

ಬಂದ ಝುಂಝಾವಾತ ತಗ್ಗಿತು ; ಒಣಗಿದೆಲೆಗಳ ಕಾಡು
ತರತರನೆ ನಡುಗಿತ್ತು ; ಖಾಂಡವ ದಹನ ಸಾಗಿತ್ತು
ಶತಮಾನಗಳ ಕಾಲ.
ಮಾಗಿ ಮಂಜಿನ ಹಾಲು ಸೋನೆಯಲಿ ಸಾಗಿತ್ತು
ವೈದ್ಯ ಶುಶ್ರೂಷೆ !

* * * *

ಇಷ್ಟಗಲ ಬಾಗಿಲನು ತೆರೆದು ಹೊರಟನು ಇವನು,
ಯಾರಿಗೂ ಹೇಳದೆಯೆ ನಟ್ಟ ನಡುರಾತ್ರಿಯಲಿ ದೂರ ದೂರ.
ಎಲ್ಲಿ ಹೋದರು ಅದೇ ಹಳೆಯ ಕೊಳಗಳ ಪಾಚಿ !
ಎಷ್ಟೊಂದು ತಳ್ಳಿದರು ಬಂದೇ ಬರುತ್ತಲಿದೆ ಈ ಪಾಚಿ,
ಹಸುರು ನಾಲಿಗೆ ಚಾಚಿ !
ತಳ್ಳುವುದು, ಹೀಗೆಯೇ ತಳ್ಳುತ್ತಲಿರುವುದೇ
ಕಡೆ ತನಕ ?
‘ ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈಹಿಡಿದು ನಡೆಸೆನ್ನನು.’
‘ ನನ್ನ ದಾರಿಯ ನಾನೆ ನೋಡಿ ಹಿಡಿದೆನು,—ಇನ್ನು,
ಕೈ ಹಿಡಿದು ನಡೆಸು ನೀನು.’

ಜಡಿ ಮಳೆಯ ಇರುಳಿನಡಿ

" ಗುಬ್ಬಕ್ಕಾ ಗುಬ್ಬಕ್ಕಾ ಬಾಗಿಲು ತಗೀ...."
ಭೋರೆಂಬ ಸುರಿಮಳೆ; ಕ್ಕಾರೆಂಬ ಕತ್ತಲು.
ಹೆಪ್ಪುಗಟ್ಟಿದ ಕಪ್ಪು ಕರಗಿ ಮಳೆ ಹನಿಯಾಗಿ
ರಪರಪನೆ ಬಡಿದಿದೆ.
ಮಿಂಚು ನಾಗರ ಸಂಚು ಮುಗಿಲುದ್ದ ನಾಲಗೆ ಚಾಚಿ
ಹರಿದಾಡಿದೆ.
ಮುಚ್ಚಿರುವ ಬಾಗಿಲೆಡೆ ನನ್ನ ದನಿ ಕ್ಕೊರಗಿದೆ :
" ಗುಬ್ಬಕ್ಕಾ ಗುಬ್ಬಕ್ಕಾ ಬಾಗಿಲು ತಗಿಯೇ...."

ಇಲ್ಲ, ಕೇಳುವಂತಿಲ್ಲ ನನ್ನ ದನಿ.
ಮಳೆಗೆ ನಾಂದುಡಿಗೆ ಮೆತ್ತಿಕೊಂಡಿದೆ ಮೈಗೆ; ಗಂಟಲು
ಕಟ್ಟಿ ಹೋಗಿದೆ ಛಳಿಗೆ; ನನ್ನ ದನಿ ಕೇಳಿಸದು ಒಳಗೆ.
ಕಲ್ಲು ಕಟ್ಟಡದೊಳಗೆ ಭದ್ರವಾಗಿರುವರಿಗೆ
ನನ್ನ ದನಿ ಕೇಳುವುದೆ !
ಕೇಳಿದರು ಬಡಿದ ಕದ ತೆರೆವುದೇ ?

' Knock, and it shall be opened unto you '
ದಬ್ಬಿದರೆ ತೆರೆವ ಬಾಗಿಲೇ ಇದು !
ಅಂದು ಅಲಿಬಾಬನಿಗೆ ತೆರೆದಿತ್ತಲ್ಲ,
ಅದರ ಪರಿಯೇ ಬೇರೆ.
ಎಷ್ಟೊಂದು ಬಾಗಿಲನು ದಬ್ಬಿ ಬಂದಿದ್ದೇನೆ ನಾನು
ಸುರಿವ ಮಳೆಯೊಳಗೆ;
ಇಲ್ಲ, ನನ್ನ ದನಿ ಕೇಳಿಸಲಿಲ್ಲ ಯಾರಿಗೂ
ಈ ಕತ್ತಲೊಳಗೆ.

Where have you built thy church ?
Upon the rock or upon the sand ?
ಕಿವಿಗೆ ಬೀಳುವ ಮುನ್ನ, ಭೋರೆಂಬ ಸುರಿಮಳೆ, ಕಾರೆಂಬ
ಕತ್ತಲು ;

ಕುರುಡುಗಾಳಿಯ ಮೊರೆತ ಸುತ್ತಲೂ ಮುತ್ತಲೂ.
ಮಿದುವಾದ ನೆಲಷೆದೆಗೆ ಒಂದೇ ಸಮನೆ ಸುತ್ತಿಗೆಯೆತ್ತಿ
ಬಡಿಯುತಿದೆ ಕತ್ತಲೆಯ ಶಿಲುಬೆ ಮಳೆ.
ಹಾಗೆಯೇ ಕುಸಿಯುತಿದೆ ತಲೆಯೆತ್ತಿ ನಿಂತ ಬೆಳೆ.

ಈ ಮೊದಲೆ ಯಾರ್ಯಾರೊ ಬಂದು ಹೇಳಿದ್ದುಂಟು :
ಮನೆ ಭದ್ರವಿಲ್ಲ ; ಮಳೆಗಾಲ ಬಂದಾಗ ಬಲು ಕಷ್ಟ.
ಕೇಳಿದೆನೆ ನಾನು ?
" ನಾಳೆ ಜಲ ಪ್ರಳಯ ; ಕಟ್ಟು ತೆಪ್ಪವ ; ಬಿಡು ಭಯವ ;
ನಾ ಬಂದು ದಾಟಿಸುತ್ತೇನೆ ಆ ಜಲವ "—

ಇಲ್ಲ ; ಮನುವಿನ ಕಿವಿಗೆ ಕಿರು ಮೀನು ಹೇಳಿದ ಮಾತು
ನನಗೆ ಕೇಳಿಸಲಿಲ್ಲ.
ಇಗೋ, ಈಗ ಜಡಿಮಳೆಯ ಇರುಳಿನಡಿ ಬಂದು
ಯಾರದೋ ಬಾಗಿಲ ಮುಂದೆ ನಿಂತಿದ್ದೇನೆ.
ಚಿಕ್ಕಂದು ಅಜ್ಜಿ ಹೇಳಿದ ಕತೆಯ ನೆನೆಯುತಿದ್ದೇನೆ :
ಕಾಗಕ್ಕನದು ಸಗಣಿ ಮನೆ ; ಗುಬ್ಬಕ್ಕನದು ಕಲ್ಲಿನದು.
ಒಂದು ದಿನ ಕಾರೆಂಬ ಕತ್ತಲು, ಭೋರೆಂಬ ಸುರಿ ಮಳೆ.
ಸಗಣಿಮನೆ ಕೊಚ್ಚಿ ಹೋಯಿತು ಮಳೆಗೆ ; ಕಾಗಕ್ಕ
ಬಂದು ಕರೆಯುತಿದ್ದಾಳೆ ಗುಬಕ್ಕನಿರುವ ಕಲ್ಮನೆಯ
ತಲೆ ಬಾಗಿಲೊಳಗೆ :
' ಗುಬ್ಬಕ್ಕಾ ಗುಬ್ಬಕ್ಕಾ ಬಾಗಿಲು ತಗಿಯೇ....'

ಪತಿತ

ಮಬ್ಬುಗತ್ತಲ ಕೂಪ,
ಸುತ್ತಲೂ ಹಲವಾರು ಅಸ್ಪಷ್ಟ ರೂಪ.
ನನ್ನಂತೆಯೇ ಇತ್ತ ಎಂದೊ ಹೇಗೋ ಬಂದು
ಬಿದ್ದ ಬಾಳಿನ ಮುರುಕು,
ನೀರೆಳೆವಾಗ ಹಗ್ಗವು ಹರಿದು ಬಿದ್ದಂಥ
ಬಿಂದಿಗೆಯ ಸರಕು!

ಒಂದೆ ಮಾರಗಲ;
ಸುತ್ತಲೂ ಗೋಡೆ.
ಮೇಲೆ ಎಲ್ಲೋ ಆ ದೂರದಲಿ ಕಾಣುತಿದೆ
ಮುಗಿಲ ಮುಚ್ಚಳವು.
ಇಲ್ಲಿ ಒಳಗಡೆ ದಿನವು ಕಲ್ಲುಗೋಡೆಗೆ ಬಡಿವ
ಕೊಳೆ ನೀರ ಹರವು!

ಕಪ್ಪೆಗಳ ಪರಿವಾರ, ಸೊಳ್ಳೆಗಳ ಸಂಸಾರ
ದುರ್ನಾತಗಳ ಅಂಗಡಿಯ ಬೀದಿ,
ಎದ್ದರೂ ಬಿದ್ದರೂ, ನುಡಿದರೂ ನಡೆದರೂ
ಇದೇ ರಾಜವೀಥಿ!

ದಿನಕೊಮ್ಮೆ, ಓ ಒಂದೇ ಒಂದುಸಲ ಬಂದು
ಬೆಳ್ಳಿ ಕಡೆಗೋಲಂತೆ ಬಿಸಿಲ ಕೋಲೊಂದು
ಅಂತರಂಗವ ಕಡೆದು ಮೇಲೆ ಬಾ ಎಂದು
ನುಡಿದು ಮುತ್ತಿಡಗುವುದು ಬಂದಂತೆ ಸಂದು!

ಬೆಟ್ಟು ಸೀಪುವ ಹಸುಳೆ ತಾಯ್ಮೊಲೆಯನುಣುವಂತೆ
ಭ್ರಾಂತಿಗೊಂಡು
ತನ್ನ ತಾನೇ ಹೇಗೊ ಸಂತೈಸಿಕೊಂಡು

ನಗುವಂತೆ ಇದೆ ಬಾಳು ಕೂಪದೊಳಗೆ
ತನ್ನದೇ ಆದೊಂದು ಲೋಕದೊಳಗೆ

ಯಾವ ಬೆಳಕಿನ ಪಾತಾಳಗರುಡವು ಬಂದು
ಮಿಂಚುಕೊಂಡಿಯೊಳಿದನು ಮೇಲಕೆತ್ತಿ,
ಗಡಿಯಾರದೊಳಗಡೆಗೆ ಸುತ್ತಿದಲ್ಲೇ ಸುತ್ತಿ
ನಮೆವ ಮುಳ್ಗಳ ತೆರದ ಬದುಕನೆತ್ತಿ,
ಎಂದು ಒಯ್ವುದೊ ಕಾಣೆ ಬಿತ್ತರದ ಬಾನ್ಗೆ
ಕಾಯಬೇಕೇ ಇನ್ನು ಎಲ್ಲಿವರೆಗೆ?

ನಿರ್ಧಾರ

ಕಂಡಿಲ್ಲವೇ ನೀವು ?
ನಮ್ಮ ಸುತ್ತಲು ಸದಾ ಐದು ಮಂದಿಯ ಪಹರೆ—
ಹೋದಲ್ಲಿ, ಬಂದಲ್ಲಿ, ನಿಂತಲ್ಲಿ, ಕುಳಿತಲ್ಲಿ
ನಮ್ಮ ಮೇಲೇ ಇವರ ಹಸಿದ ಕಣ್ಣು !

ಹುಟ್ಟಿ ಕಣ್‌ಬಿಟ್ಟಂದು ವೈಗೆ ತೊಟ್ಟಿಲನಿತ್ತು
ತಾಯ ಕೊರಳಲಿ ಕುಳಿತು ಹಾಡಿದವರು.
ನೆಲದ ಹಸುರೊಳು ಮುಗಿಲ ಮಳೆಹನಿಯ ದಾರದಲಿ
ಹೂ ಕಸೂತಿಯ ಹೆಣೆದು ಹಾಸಿದವರು.
ಬೆಳಗಾಗ ಬಾಗಿಲಲಿ ತುಂಬು ಕೆಚ್ಚಲ ಕರೆದು
ತುಟಿಗೆ ಕೊಟ್ಟವರು.
ಹೆಜ್ಜೆ ಹೆಜ್ಜೆಗು ನಿಂತು ಕೈಹಿಡಿದು ಮೇಲೆತ್ತಿ
ಚಂದುಮಾಮನ ಕನಸ ಬಿತ್ತಿದವರು.

* * * *

ನಾನು ನಂಬಿದೆನಿವರ : ಬಣ್ಣದಲಿ ಬೆರಗಿನಲಿ
ಬೆರೆದರಿವರು.
ಮರ ಮರದ ತುಂಬ ಹಕ್ಕಿಯ ಲಾಲಿ ; ತಳಿರಿನ ಜೋಲಿ ;
ಹೂವಿನ ಹೋಳಿ—ಬುಗ್ಗೆ ಬುಗ್ಗೆ !
ಕಂಡ ಕಂಡೆಡೆಯಲ್ಲಿ ಕೈಚಾಚಿ ನುಗ್ಗಿದೆನು
ಇವರ ಜೊತೆಗೆ ;
ನೂರು ಕೊಂಬೆಗೆ ನೆಗೆದು, ಗುಡ್ಡ ಬೆಟ್ಟವನೇರಿ
ಮೋಡವಾಗಲೆದು,
ದೂರ ಕಡಲಿಗೆ ಬೆದರಿ, ಸುಳಿದು ಸುತ್ತಿ,
ಕಡೆಗೆ ಕಾಮನಬಿಲ್ಲ ಜಾರುಗುಪ್ಪೆಯನಾಡಿ
ಬಂಡೆ ಬಂಡೆಯ ಬುಡಕೆ ಬಂದು ನಿಂತೆ,
ಹೆಗಲ ಮೇಲೇರಿತ್ತು ದೊಡ್ಡ ಕಂತೆ.

ನಸುನಕ್ಕರೈದು ಜನ—
ತಂತುಕೃತಿಯಂಥ ನಗು, ನವುರು ನವುರು.
ಗೋಡೆಯ ಮೇಲೆ ಹಲ್ಲಿಯ ನೆರಳು;
ನೆರಳಲ್ಲ, ಗ್ರಡಿಗೆ ಕಣ್ಣಿನ ಸರಳು ಸೆಳೆದಿತ್ತು ದೂರ ಹಾರುವ ನೊಣವ
ಅಂಟು ನಾಲಗೆ ಚಾಚಿ!
ಮನೆಯಂಗಳದಿ ಆಗ ತಾನೇ ಅರಳಿ ಮುದ್ದಾದ ಮಲ್ಲಿಗೆಗೆ
ಬಾಯಿ ಹಾಕಿತ್ತೊಂದು ಕಪ್ಪು ಕೋಣ.
ಮುದಿಯ ಮರ ಲಟಕಟಿಸಿ ಉರುಳಿತ್ತು
ಸೆಳೆದಿತ್ತು ಬಿರುಗಾಳಿಯುರುಳು,
ಅಲ್ಲೆಲ್ಲ ಕಾಣಿಸಿತು ಇವರ ನೆರಳು!

* * * * *

ಬಾಡಿಗೆಯ ಮನೆಯಿಂದ ಬಾಡಿಗೆಯ ಮನೆಗೆ ನಡೆದಿರುವೆ,
ಇರುವ ಮನೆಯನು ಮೊದಲು ಸರಿಮಾಡಿಕೋ.
ಕಸ ಗುಡಿಸು; ದೀಪವ ಹಚ್ಚು ; ಈ ಐವರನು ನಂಬದಿರು
ಆದಷ್ಟು ದೂರವಿರಿಸು—

ಬಿಡಲಿಲ್ಲ ಇವರೆನ್ನ,
ಸದಾ ಜೊತೆಗೂಡಿ ನನ್ನೊಡನೆ ಜಗ್ಗುವುದೆ ಕೆಲಸ
ದೂರ ಹಾರುವ ಪಟವ ಮತ್ತೆ ಮತ್ತೆ!

ರೇಗಿತು ನನಗೆ—
ಎಳೆಯಂದು ಸಾಕು ತಾಯಾದವರು,
ಹರಯದಲಿ ಜೊತೆಗೂಡಿ ನಿಂದವರು,
ಒಳಮನೆಯ ಆಡಳಿತದಲಿ ಆಪ್ತರಾದವರಿವರು,
ಸರ್ವದಾ ಬೆನ್ನ ಬಿಡದಂತೆ ನೆರಳಾಗಿ ಸುಳಿಯುವರು,
ಇವರ ಮೇಲೇ ನಾನು ಹೂಡಬೇಕೇ ಯುದ್ಧ
ಹಿಡಿಯಬೇಕೆ ಇನ್ನು ಬಿಲ್ಲುಬಾಣ?

‘ ಕ್ಷುದ್ರಂ ಹೃದಯ ದೌರ್ಬಲ್ಯಂ
ತ್ಯಕ್ತ್ವೋತ್ತಿಷ್ಠ ಪರಂತಪ ’
ನಾನೇನು ಪ್ರಾರ್ಥನೆ ? ಆದರೂ ಕಾದಿದೆನು ಹಗಲು ಇರುಳು,
ಚುಚ್ಚಿದವು ಹತ್ತಾರು ಕೆಂಪು ಸರಳು.

ಅಲ್ಲಿಂದೀಚೆ, ನಾನು ನಾನೇ ಆದೆ ; ನಿಂತೆ
ಬೆಳ್ಗೊಳದ ಗೊಮ್ಮಟನ ನಗೆಯ ಬೆಳುದಿಂಗಳಡಿ ಕಣ್ಣ ತೆರೆದು—
ಇವರೆಲ್ಲ ನಮ್ಮವರೆ, ನಿಜ, ನಾನೊ ಆಗಂತುಕನು
ತೀರ್ಥಯಾತ್ರಿ.
ಇವರ ಛತ್ರದೊಳಿದ್ದು, ತೆರುವುದನು ತೆತ್ತು ನಡೆಯುವೆನು
ಒಂದು ರಾತ್ರಿ.
ಹಿಡಿಯಲಾರದು ನನ್ನ ಇವರಾವ ಸೂತ್ರವೂ,
ನಾನು ನಿರ್ಲಿಪ್ತ ;
ಬೆಂಕಿಯು ಸುಡದು ; ನೀರು ನೆನೆಸದು ; ಮಣ್ಣು ಮೆತ್ತದು ;
ಗಾಳಿ ಹಾರಿಸದು, ಪಂಚಭೂತದ ಸಂಚು ತಟ್ಟದು ಇನ್ನು,
ನಾ ಸ್ಥಿತಪ್ರಜ್ಞ.

ನಿರ್ಧಾರವನು ಕೇಳಿ ನಸುನಕ್ಕರೈವರೂ—
‘ ಪಗೆಗೆ ಪಗೆ/ಕೆಳೆಗೆ ಕೆಳೆ ’ ನಾವು.
ಹಾರೈಸುವೆವು ನೀನಾಗು ಬುದ್ಧ
ನಿನ್ನ ಸೇವೆಗೆ ನಾವು ಎಂದಿಗೂ ಸಿದ್ಧ.

ಶೋಧನೆ

ನುಗ್ಗು ಎದೆಯೊಳಸುಳಿಯ ತಳದಾಳಕೆ
ನೋವಿನಕ್ಷಯ ಪಾತ್ರೆಯೊಡಲಾಳಕೆ
ಬಿಡು ಒಳಗೆ ಬಿಡು ಒಳಗೆ
ಪಾತಾಳ ಗರುಡ
ಅದೊ ನೋಡ ನೋಡ.

ಯಾರು ಯಾರೋ ಸೇರಿ ಇರಿದ ಚೂರಿಯ ತುಣುಕು
ಅಣುಕು ಮಿಣುಕು !
ನೂರಾನೆ ಕಾಲುಗಳು ನುಗ್ಗುನುರಿ ಮಾಡಿರುವ
ಬಿಂದಿಗೆಯ ಸರಕು !
ಎದೆಯ ಮಿದುವಾಸಿನಲಿ ಕಾವು ಪಡೆಯುತಲಿದ್ದ
ಮೊಟ್ಟೆಗಳ ಹೋಳು !
ಮುಗಿಲೊಳಾಡಿದ ಹಲವು ಪಾರಿವಾಳದ ರೆಕ್ಕೆ
ನೂರು ಸೀಳು !

ಹಲವು ಬಾಗಿಲೊಳಲೆದು ತಿರಿದು ತುಂಬಿದ ಪಾತ್ರೆ--
ಯೊಡಕು ರಾಶಿ,
ಅಯ್ಯೋ ಪರದೇಶಿ !
ನೂರು ಚೆಲುವೆಯ ಮೊಗವ ತನ್ನ ಎದೆಯೊಳು ಹಿಡಿದ
ಕನ್ನಡಿಯ ಚೂರು
ಬರಿ ಕೆಸರು ಕೆಸರು !
ಎನಿತೊ ಬೆಳಕನು ಹಿಡಿದು ಕಡೆದಿಟ್ಟ ವಿಗ್ರಹದ
ಭಗ್ನಾವಶೇಷ
ಮತ್ತೇನ್ ವಿಶೇಷ ?....

ಇನ್ನು ಏನೇನಿಹುದೊ ! ಇರಲಿ ಬಿಡು ತೆಗೆದೆದೆಯ
ಕಲಕಬೇಡ,
ಹಳೆಯ ನೆನಪಿನ ಕೊಳವ ಕದಡಬೇಡ.

ಅಮೃತ ಮುಹೂರ್ತ

ಬಾನೆತ್ತರದ ಬೆಂಕಿಮೈಯನು ಬಳಸಿ
ಜಾರಿರಲು ಧೂಮವೇಣಿ,
ಚಿಕ್ಕೆ ಹಾದಿಯೊಳೆಲ್ಲಿ ನೀನೆತ್ತ ಹೊರಟಿರುವೆ
ಚಿಂತಾಮಣಿ?
ಫಾಲನೇತ್ರನ ದೀಪ್ತಿ ಜ್ವಲಿಸುತಿಹ ಕರ್ಣ್‌ಕುಂಡ,
ಮನವೊ ದಿವವನು ತಿವಿವ ಬ್ರಹ್ಮದಂಡ!

ಅದಿಗೊ ಕರೆಯುತ್ತಲಿದೆ ಕನಕಸರ್ಪದ ಬಳಸು
ಅನುರಾಗ ದೀಪಗಳ ಹೆಡೆಯಾಡಿಸಿ
ಅರಮನೆಯ ವೈಭವದ ಮೋಹಮಂದಿರದಲ್ಲಿ
ಕರೆಯುತಿದೆ ಪುಂಗಿದನಿ ಬಲೆಯ ಬೀಸಿ:
'ಬಾ ಬಾರೆ ಬಾ ಚೆಲುವೆ,
ಬಾ ಇಲ್ಲಿ ನಿನಗೊಲಿವೆ
ಪಟ್ಟಮಹಿಷಿಯ ಪದವಿ ಇಗೊ ಮೀಸಲು.'

ಬೂದಿರಾಶಿಯ ನಡುವೆ ಎದ್ದು ಬಂದನು ಕಾಮು
ಮತ್ತೊಮ್ಮೆ ಹೂಡಿದನು ಕುಸುಮ ಶರವ;
ಬೋಧಿವೃಕ್ಷದ ಸುತ್ತ ಬಂದು ನಿಂತನು ಮಾರ;
ರಂಭೆ ಅಪ್ಸರೆಯರಿದೊ, ಹಾವಭಾವ;
ಬಂಗಾರ ಬಯಕೆಗಳ ಸೈತಾನ ಮಾಟವಿದೊ
ತೆರೆಯುತಿದೆ ಕಣ್ಣೆದುರು ಹೊಸ ಲೋಕವ!

"ಬೇಡ ಬೇಡವೊ ಬೇಡ ನಾಲ್ಕು ದಿನಗಳ ಬದುಕು,
ಸಾವ ಕೆಡುವರನೊಯ್ದು ಒಲೆಯೊಳಗೆ ಇಕ್ಕು!
ಊರ ಸೀರೆಗೆ ಅಗಸ ಸಡಗರವಗೊಂಬಂತೆ
ತೆರಣಿಯಾ ಹುಳು ತನ್ನ ನೂಲೊಳಗೆ ಸಿಕ್ಕಂತೆ
ಅದು ನನದು, ಇದು ನನದು, ಎಂದು ನೊಂದೆ;

ಕಿಚ್ಚಲ್ಲದುರಿಯಲ್ಲಿ ನಾನು ಬೆಂದೆ,
ಸಾಕು ಸಾಕೋ ಸಾಕು,
ಅದನಾಚೆ ನೂಕು........ ”

ಶೂನ್ಯ ಮಂದಿರದಲ್ಲಿ ಸುಯ್ಯುತಿದೆ ನರುಗಂಪು,
ಸಾಲು ಸುಪ್ಪತ್ತಿಗೆಯ ರನ್ನಗಂಬಳಿ ನೆಲದಿ –
ಪವಡಿಸಿದೆ ಅರಮನೆಯ ನೆಳಲ ತಂಪು.
ಮೂಕವಾಗಿದೆ ವೀಣೆ, ಭಗ್ನವಾಗಿದೆ ಮುರಳಿ
ನಿನಗಾಗಿ ಕಾಯುತ್ತ ಕೊರಗಿ ನರಳಿ.

ತುಂಬಿದುದ್ಯಾನದಲಿ ಕುಸುಮ ಹೃದಯವು ಕಾದು
ಭ್ರಮರ ಗೀತದ ಕನಸ ಕಾಣುತಿರಲು.
ತುಂಬಿದ್ದ ಮಕರಂದ ಪಾತ್ರ ಬರಿದಾಗುತಿದೆ
ವಿರಹದುರಿ ಜೀವವನು ಬೇಯಿಸಿರಲು.

ಯಾವ ಮಂದಾರಗಳ ಕಂಪು ಸೆಳೆಯಿತೊ ನಿನ್ನ ?
ಯಾವ ತಿಂಗಳ ತೋಳು ಅಪ್ಪಿಕೊಂಡಿತೊ ನಿನ್ನ ?
ಯಾವ ಬೆಂಕಿಯು ಬಳಸು ನುಂಗಿ ನಿಂತಿತೊ ನಿನ್ನ ?
ಇದೆ ನಿನ್ನ ನಿರ್ಧಾರವೇನು ?
ಹೊನ್ನ ತಿಳಿಗೊಳದಲ್ಲಿ ಕೇಳಿಯಾಡಿರೆ ಮೀನು
ಅವನ ಗಾಳವು ಇಲ್ಲು ಬಂದಿತೇನು !

ಧವಳ ಹೈಮಾಚಲದ ಮೌನ ಶಿಖರದ ಸುತ್ತ
ಕರಗಿದುದು ಕಾಮಧನು/ತುಹಿನ ರಾಶಿ
ಮಾನಸ ಸರೋವರದ ಹಾಲ್ದಿಂಗಳಲೆಗಳಲಿ
ಬಿಂಬಿಸಿತು ತೇಜಸ್ವಿ ರವಿಯ ರಶ್ಮಿ !

ನಿರ್ನಾಮನಾದನು ಕಾಮ : ಜಾರಿಬಿದ್ದಿತು ಬಿಲ್ಲು
ಬೂದಿಯೊಳಗೆ—

ರಂಭೆ ಮೇನಕೆಯೊಡನೆ ಜಾರಿಹೋದನು ಮಾರ
ಸೈತಾನನೊಡನೆ !

ಹರಸಿದಳು ಮಹಾಶ್ವೇತೆ,
ಒಲಿದು ನಕ್ಕಳು ಸೀತೆ;
ಹರನ ಗೆಲ್ದಾ ಗೌರಿ
ಆಗಿರಲು ಸಂಪ್ರೀತೆ,
ಶುಭ್ರವಾಯಿತು ಬಾನು, ಜಿನುಗಿತ್ತನಿದನಿ ಜೇನು ;
ವ್ಯೋಮ ಕೇಶನ ಮುಡಿಯ ಗುಡಿಯ ಕಲಶದ ಕಾಂತಿ
ತುಳುಕಿ ಬಂದಿತು ಪರಮ ಹರಕೆಯೋಲೆ.
ಶ್ರೀಶೈಲ ಶಿವಜೂಟದಿಂದ ಬಂದಿತು ಬೀಸಿ
ದಿವ್ಯ ಮಂದಾರಗಳ ಕಂಪಿನೋಲೆ !

ಬಾನು ನುಡಿಯಿತು ಇಂತು,
ಋಷಿಯಂತೆ ನಿಂತು :
" ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೊಲಿದವಳು,
ಎಡೆಯಿಲ್ಲದ ಕಡೆಯಿಲ್ಲದ ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದವಳು,
ಕಡಲಾಳದ ಕೆಚ್ಚೆದೆಯುಲಿ ಕಾಮಾರಿಯ ಗೆದ್ದವಳು ! "

ಬೆಳಕು ಮೈ ನಡೆದಿತ್ತು ಕತ್ತಲೆಯ ಮುಡಿಗೆದರಿ
ಚಿಕ್ಕೆ ಹೆಜ್ಜೆಯನಿಟ್ಟು ಬಾನ ತುಂಬ !
ಬೆಳಗು ಬೆಳಗೊಳು ಬೆರೆದು ಒಲವಿನಲಿ ಮೂಡಿತ್ತು
ಶ್ರೀಶೈಲ ಜೂಟದಲಿ ಚಂದ್ರಬಿಂಬ !

ಸ್ಪೂಟ್ನಿಕ್—ವಿನೋಬಾ

ಅಗೊ ಸ್ಪೂಟ್ನಿಕ್, ಇಗೊ ವಿನೋಬ,
ಈ ಎರಡೂ ಸೋಜಿಗ,
ಬಾನೊಳೊಂದು ಬುವಿಯೊಳೊಂದು ;
ಬೆರಗಾಗಿದೆ ಈ ಜಗ.

ಕಲ್ಪನೆಯೂ ಮೂಗುವಡುವ ಸಹಸ್ರಾರು ಮೈಲಿ ವೇಗ
ಅದರ ಚಲನೆ ಗಂಟೆಗೆ !
ದಿನವು ಎಂಟೊ ಹತ್ತೊ ಮೈಲಿ
ನಡೆವನಿವನು ಮೆಲ್ಲಗೆ !

ಕ್ರಮಿಸುವುದದು ದಿನವೊಂದಕೆ
ಲೋಕಾಂತರದಗಲವ !
ಬೇಡುವನಿವನೊಂದೊ ಎರಡೊ
ಎಕರೆಯಷ್ಟು ಭೂಮಿಯ !

ಬಹಿರಂಗವ ಗೆಲುವ ರಭಸದಟ್ಟಹಾಸ ಜ್ವಲಿಸುತಿಹುದು
ಸ್ಪೂಟ್ನಿಕ್ಕಿನ ಮುಖದಲಿ !
ಒಳಬಗೆಗಳನೊಲಿದು ಗೆಲುವ ಚಂದ್ರಹಾಸ ಮಿನುಗುತಿಹುದು
ಇವನ ಎರಡು ಕಣ್ಣಲಿ !

ಅದೋ ತಿರುಗಿ ಬೂದಿಯಾಗಿ,
ಮೈಲಿ ಕಲ್ಲ ನಿಲ್ಲಿಸಿತ್ತು ವಿಜ್ಞಾನದ ಹಾದಿಗೆ.
ಇವನು ನಡೆದ ಹೆಜ್ಜೆಯೆಲ್ಲ
ಬೆಳಕಾಯಿತು ತಣ್ಣಗೆ !

ಉಪಗ್ರಹಗಳನೊಂದೆ ಸಮನೆ
ಆಕಾಶಕೆ ಏರಿಸುತಿದೆ
ರಾಕೆಟ್ಟಿನ ಸಾಧನ.
ಜನಮನಗಳ ಹಾದಿಯಲ್ಲಿ
ನಡೆದು ಮೆಲನೆ ನುಡಿವನೀವನು :
'ನೆಲವೆ ನನ್ನ ವಾಹನ!'

ಇದುವರೆಗು ನೀವು ಕೇಳಿದ್ದು

ಮಡುವಿನಲಿ ಮಂಡಲವಾಗಿ ಮಲಗಿದ್ದ ಹೊಳೆ
ಮೈಯ್ಯನ್ನೆಳೆದು ಮೆಲ್ಲನೆ ಸಾಗತೊಡಗಿದೆ ಈಗ,
ಜುಳುಜುಳನೆ ಜುಳುಜುಳನೆ ಹೆಚ್ಚತೊಡಗಿದೆ ವೇಗ.
ಜಲತರಂಗದ ಪಲುಕು, ನೀರ್ ವೀಣೆಗಳ ಮಿಡಿತ;
ಒಳಗೆ ಮೀನಾಡುತಿವೆ,
ಒಂದು, ಎರಡು, ಮೂರು ; ಮೂರಲ್ಲ ನೂರು,
ನೂರಲ್ಲ ಸಾವಿರ !
ಬಣ್ಣಬಣ್ಣದ ಮೀನು, ಬೆಳ್ಳಿ ಹೊಟ್ಟೆಯ ಮೀನು,
ನಾಗಲೋಕದ ರಮ್ಯ ರಂಗಮಂಟಪದಲ್ಲಿ
ಮಿಂಚುತೆಳ್ಳನೆ ಪರದೆ, ಕಾಮಧನುಗಳ ಲಾಸ್ಯ ;
ಬೆನ್ನಿನ ಹಿಂದೆ ತೂಗಾಡುತಿದೆ ಹಾವಿನ ಜಡೆ.
ಕಣ್ಣ ಕಣೆ ತಾಗಿತ್ತು ಕಲ್ಪವೃಕ್ಷದ ಗೊನೆಗೆ.
ಸೊಂಡಿಲನೆತ್ತಿ ದಟ್ಟಡಿಯಿಡುವ ಐರಾವತದ
ಹಾಲುಮೈ ಮರಿ ಪುಟಾಣಿ.
ನೀಲಗಿರಿ ಕಂದರದಿ ಮಂಜನು ಕಡೆವ
ಕಿರಣಗಳ ಕಡೆಗೋಲು ;
ನೊರೆ ಸಿಡಿದು ಮೋಡಮೋಡಗಳಾಗಿ
ನೀಲಿಯಲಿ ನಗೆಯರಳಿ ಹೂವಾಯ್ತು.
ಮೇಘದೇಗುಲಗಳಲಿ ಮಿಂಚಿನಾರತಿ ಬೆಳಕು.
ನಸುನಕ್ಕ ನೀಲಿಯಲಿ ಹುಬ್ಬುಗಂಟಿನ ಗುಡುಗು.
ಹೃದಯದೊಳಗುಟ್ಟುಗಳ ಮದ್ದಿನುಗ್ರಾಣಕ್ಕೆ
ಕಿಡಿಯಿಡುವ ಸನ್ನಾಹ.
ಹಳೆಯ ನೆನಪಿನ ಕಲ್ಲನೊಂದೊಂದನೇ ಎತ್ತಿ
ಎಸೆವ ಕವಣೆಯ ತೋಳು.
ಮರೆತ ಕತೆಯಿಂದಾಯ್ದ ಒಂದೊಂದೆ ನುಡಿಮುತ್ತು-
ಗಳನೆತ್ತಿ ಸಮೆದ ಹಾರದ ಸಾಲು.

ಇರುಳೆಲ್ಲ ಕಣ್ಣೀರಿನಿಂದ ನೆಲವನು ನೆನೆಸಿ
ನಿಡುಸುಯ್ದು ನಡೆವ ಮೋಡದ ಹಿಂಡು.
ಗಾಳಿ, ಬಿರುಗಾಳಿ—ದಾಳಿ.
ಮೋಡದ ಸಾಲು ದಿಕ್ಪಾಲು.
ಚಂದಿರನ ಹಾಲು ಕರೆಯುವ ಬೆಳಕುಗೆಚ್ಚಲ ಧೇನು.
ಏನು! ದನಿಯು ನಿಂತಿತೆ?
ರೇಡಿಯೋ ಮುಖದಲ್ಲಿ ಮಂದಹಾಸದ ಬೆಳಕು.
"ಇದು ಆಕಾಶವಾಣಿ, ಇದುವರೆಗು ನೀವು ಕೇಳಿದ್ದು
ಸಿತಾರ್ ವಾದನದ ಮುದ್ರಿಕೆ."

ಬಿಡುಗಡೆಯ ನೆನಪು

(ಆಗಸ್ಟ್ ೧೯೫೮)

ಇಲ್ಲ, ನಿನಗೆ ಬಿಡುವಿಲ್ಲ—
ಒಂದೇ ಸಮನೆ ನೊಗಕೆ ಕೊರಳನು ಬೆಸೆದು
ಗಾಣ ತಿರುಗುವ ನಿನಗೆ ಬಿಡುವೇ ಇಲ್ಲ.

ನಿನ್ನೆದೆಯ ಹಂತ ಹಂತದ ಮೇಲೆ
ನೂರಾರು ಕಡತಗಳ ಕಂತೆ.
ಹಗಲ ಜಂತೆಯ ತುಂಬ ಜೋತಾಡುತಿವೆ
ಎಷ್ಟೊಂದು ಯೋಜನೆಯ ಚಿಂತೆ!
ದಿನ ಬೆಳಗು ಇಲ್ಲಿ ಈ ಸಭೆಯಲ್ಲಿ, ಅಲ್ಲಿ ಆ ಗೋಷ್ಠಿಯಲಿ
ನಿನ್ನ ಅಧ್ಯಕ್ಷತೆ;
ಈ ಮನೆಯ ಕೋಣೆ ಕಿರು ಕೋಣೆಯೊಳು ಆಗಾಗ
ಗಂಡ ಹೆಂಡಿರ ಜಗಳ,
ಅಕ್ಕಪಕ್ಕದ ಮನೆಯ ವಹಿವಾಟಿಗೂ ನಿನಗೆ ಆಮಂತ್ರಣ.
ಹೇರಿದಷ್ಟೂ ಹೊತ್ತು ನಡೆವ ಲಾರಿಯ ಹಾಗೆ ಸಾಗುತ್ತಲೇ ಇರುವ
ಈ ನಿನಗೆ,
ಎಂದೋ ಒಮ್ಮೆ ಬಿಡುಗಡೆ ಬಂದ ಗೀತವನು ಕೇಳಲೂ ಬಿಡುವಿಲ್ಲ!

ವರುಷಕ್ಕೊಮ್ಮೆ ನಿನಗೆ ನೀರೆರೆದು, ಹೊಸ ಬಟ್ಟೆ ತೊಡಿಸಿ,
ಸಾಲು ಸೈನ್ಯಗಳ ಗೌರವ ರಕ್ಷೆಯನ್ನಿತ್ತು, ನಭಕೆ ಬಾವುಟವೆತ್ತಿ,
ಬಾನುಲಿಯ ಬಾಯಿ ಕವಿ ಹೊಸೆದ ಸ್ವಾತಂತ್ರ್ಯ ಗೀತವನು
ಕಿವಿಗೆ ಗಿಡಿದಾಗ, ಒಂದಿಷ್ಟು ಮುಗುಳುನಗೆಯಿಂದ ಕೊರಳೆತ್ತಿ
ಹಾಗೇ ನಿಂತು ನೆನೆಯಬಹುದೋ ಏನೊ ಆ ದಿನವ—
ಹನ್ನೊಂದು ವರುಷದ ಹಿಂದೆ ನಟ್ಟ ನಡುರಾತ್ರಿ ಹನ್ನೆರಡು ಘಂಟೆಯಲಿ
ನಿನಗಾದ ಸೊಗವ.

* * * *

ಹನ್ನೊಂದು ವರುಷದ ಹಿಂದೆ.
ನಟ್ಟ ನಡುರಾತ್ರಿ ಹನ್ನೆರಡು ಘಂಟೆ!

ಕಗ್ಗಲ್ಲಿನೆದೆಗೆ ಬಡಿದಿತ್ತು ಹೂವಿನ ಫಿರಂಗಿ!
ಕಲ್ಲು ಕರಗಿತು ; ಕಗ್ಗತ್ತಲೊಡೆದು ಬಾನು ಬೆಳಕಾಯ್ತು ;
ಬಿದ್ದ ಬಾವುಟವೆದ್ದು ಧರ್ಮ ಚಕ್ರದ ಮೇಲೆ ಸಿಂಹಪೌರುಷದಿಂದ
ಕೊರಳೆತ್ತಿ ಗುಡುಗಿತು.
ಗರುಡಗರಿ ಗಾಳಿಯಲಿ ಹಾರಿಹೋದವು ದೂರ ಗುಡುಗು ಮೋಡದ ಹಡಗು.
ಚಿಕ್ಕೆ ಚಪ್ಪಾಳೆಯಲಿ ಚಂದ್ರನುದ್ಘಾಟಿಸಿದ ಹೊಸತು ಬೆಡಗು!
" ಇದು ನಿನ್ನದೇ: ಈ ಹೊಲ, ಈ ಜಲ, ಈ ಜನತೆ,
ಈ ಮುಗಿಲು, ಈ ಗಾಳಿ, ಇದು ನಿನ್ನದೇ...."
ಕುಗ್ಗಿ ಕುಸಿದಿದ್ದ ಹುಡಿಮಣ್ಣು ಹೆಡೆಯೆತ್ತಿ ಬಾನಗಲ ಬೆರಗು-
ಗಣ್ಣಾಗಿ ದಿಟ್ಟಿಸಿತು.
ಸಿಂಗರದ ಬಂಗಾರದೈಳೆವೆಳಗು ತಂಪಾಗಿ ಹರಡಿತು.

* * * *

ಬಿಡುಗಡೆಯ ಹಿಗ್ಗಿನಲಿ ಮುಗಿಲುದ್ದ-ಎದ್ದ-ಹೆಗಲಿನ ಮೇಲೆ
ಬಿತ್ತು ಕಾಣದ ಭಾರ!
ಇದು ದೊಡ್ಡ ಸಂಸಾರ:
ಎಷ್ಟೊಂದು ದುಡಿದು ತಂದರು ಕೂಡ ಒಳಗೊಳಗೆ ಬೆಳೆಯುತಿದೆ
ಬಿಲಗಳ ತೋಡಿ, ಬೆಳೆಯೆಲ್ಲವನು ತಿಂದು ಬಚ್ಚಿಡುವ ಹೆಗ್ಗಣದ ಪರಿವಾರ!

ತಲೆಯೊಳಗೆ ಹೆಬ್ಬಂಡೆ ಗುಂಡುಗಳ ಕಿಷ್ಕಿಂಧೆ;
ಎದೆ ತುಂಬ ಹೊದರು ಹೊದರಾದ ದಂಡಕಾರಣ್ಯ;
ಚಿತ್ತ ಪಂಪಾಸರವೊ ಪಾಚಿಗಟ್ಟಿದ ರೊಚ್ಚೆ;
ಬಿತ್ತಿದರೆ ಬೀಜವೆ ಸೀದು ಸಿಡಿಯುವ ' ಸಹರ!'

ಆದರೂ—
ಕಟ್ಟುತಿದ್ದೇವೆ ನಾವೀಗ ಹೊಸ ನಾಡನ್ನು,
' ಶುಭಮಸ್ತು '—ಎನ್ನು.

ಎಂದಿನಿಂದಲೊ ಏನೊ ವರುಷ ವರುಷವು ಊರೂರು ಕೇರಿಕೇರಿಗೆ ನುಗ್ಗಿ
ಮನೆ ಮಾರುಗಳ ಕೊಚ್ಚಿ ಮೊರೆದ ಮಾರಿಯ ಹೊನಲ ಭೋರ್ಗರೆವ
ನಾಗರನ
ಸ್ತಬ್ಧಗೊಳಿಸಿದೆ ಇದೆಕೊ ಕಟ್ಟದಣೆಕಟ್ಟುಗಳ ಮಂತ್ರದಂಡ!
ಬಂಡೆಬಂಡೆಯ ಎಬ್ಬಿ, ಹೊದರ್ಗುಗಿದುರನು ಸವರಿ ಹದಮಾಡುತಿಹುದಿಗೋ—
ಯಂತ್ರಮದಗಜವುಸಲಧಂತದೋರ್ದಂಡ.
ಶತಮಾನಗಳ ಕಾಲ ಬಾಯಾರಿ ಬಿದ್ದ ಬಂಜರ ಬಸಿರು
ಜುಳುಜುಳನೆ ಬಳಿಗೈತಂದ ನೀರಿನೊಲವನು ಕುಡಿದು
ಹಸುರ ಬೆಸಲಾಗುತಿದೆ!
ಮಳೆ ಬಿಸಿಲು ಗಾಳಿಯಲಿ ಮಣ್ಣಗೆದು ಮಂಕರಿ ಹೊತ್ತು,
ಕಟ್ಟಡ ಕಟ್ಟಿ,
ಹಳ್ಳಿಹಳ್ಳಿಯ ಹಣತೆಗೆಣ್ಣೆ ಬತ್ತಿಯನೂಡಿ,
ವೀಣೆ ತಂಬೂರಿಯೆದೆಗೆ ಹೊಸತು ತಂತಿಯ ನೀಡಿ, ಶ್ರುತಿಮಾಡಿ,
ಹರಿಯುತಿದೆ ನಾಡನಾಡಿಯ ತುಂಬ ನೂತ್ನ ಚೇತನ ಶಕ್ತಿ.
ಇಂದಲ್ಲ ನಾಳೆ ಮೈತುಂಬಿಕೊಂಡು ನಿಲ್ಲುವುದು ಈ ನಾಡು
ಸಾವಧಾನದಿ ಕಾದು ನೋಡು.

ಜನರು

ಎಂಥ ಹುಚ್ಚು ಜನರು ಇವರು
   ಕೊಚ್ಚೆಯನೇ ಕಾಂಬರು !
ಕೊಚ್ಚೆಯುಂಡು ದಡದಿ ಬೆಳೆದ
   ಹಚ್ಚ ಹಸುರ ಕಾಣರು !
ಹಚ್ಚ ಹಸಿರ ಬಣ್ಣಿಸಿದರೆ ಅದು ಕಲ್ಪನೆ ಎಂಬರು
ನಾರುತಿರುವ ಕೊಚ್ಚೆ ಮಾತ್ರ ಪರಮ ಸತ್ಯವೆಂಬರು !

ಎಂಥ ಮರುಳು ಜನರು ಇವರು
   ಬಡತನವನೆ ಕಾಂಬರು !
ಬಡವನೆದೆಯೊಳಿನ್ನು ತುಡಿವ
   ಭರವಸೆಯನೆ ಕಾಣರು !
ಬಡವರ ನೆಪದಲ್ಲಿ ಇವರೆ ಬರಿದೆ ಹುಯ್ಯಲಿಡುವರು
ದಿಟದ ಬಡವರೀಕೂಗಿನೊಳೆಲ್ಲೊ ನರಳುತಿರುವರು !

ಎಂಥ ಪೆದ್ದ ಜನರು ಇವರು
   ದಿವದ ಬೆಳಕ ಕಾಣರು !
ಮನೆಯ ಮುಂದೆ ಹರಿದರೂ
   ಕಣ್ಣ ಮುಂದೆ ಕುಣಿದರೂ
   ಎದೆಗೆ ಬಿರಡೆಯಿಡುವರು !
ಅದೂ ಸತ್ಯ ಇದೂ ಸತ್ಯ ಎಂಬ ದೃಷ್ಟಿಯಿಲ್ಲದೆ
ಬಾಳು ಬೆಳೆಯುಬಲ್ಲುದೆ ?

ಎಂಥ ನಿಸ್ಸತ್ವ ಜನರು
   ವಿಫಲತೆಯನೆ ಕಾಂಬರು !
ವಿಫಲತೆಯೊಳು ಸಫಲತೆ ಚಿಗು-
   ರಿಡುವುದನೇ ಕಾಣರು !
ಅಳಿವಿನಲ್ಲು ಉಳಿವು ಮೊಳೆವ ಚೋದ್ಯವನ್ನು ಈ ಜಗ
ನೂರು ಚೈತ್ರದಲ್ಲಿ ಮಾಡಿ ತೋರಿದರೂ ಉಬ್ಬೆಗ !

ಬಿಸಿಲನುಂಡು ಬೆಳುದಿಂಗಳ
ಕೊಡುವ ಚಂದ್ರನಂದದಿ,
ನೋವ ನುಂಗಿ ನಗೆಯನೀವ
ಆತ್ಮಶಕ್ತಿ ಬರುವುದೆ ?
ಅಡಿ ನೆಲದಲಿ ಕಣ್ ಮುಗಿಲಲಿ ರೆಕ್ಕೆಯೊಳಗೆ ವಿಶ್ವವ
ತಬ್ಬುವಂಥ ಗರುಡಶಕ್ತಿ ಬರುವವರೆಗು ರೌರವ !

ಹಿನ್ನುಡಿ

ಅದೂ ಬೇಕು ಇದೂ ಬೇಕು
ಎಲ್ಲವೂ ಬೇಕು ನನಗೆ.
ದಾರಿ ನೂರಾರಿವೆ ಬೆಳಕಿನರಮನೆಗೆ!

ಬೇಡ ನನಗೆ ಸಿದ್ಧಾಂತಗಳ ರಾದ್ಧಾಂತ;
ನನಗಿಲ್ಲ, ಇದೇ ಸರಿ ಇಷ್ಟೇ ಸರಿ ಎನುವ ಪಂತ.
ನಾ ಬಲ್ಲೆ, ಇವು ಎಲ್ಲ ಏರುವೆಯ
ಒಂದೊಂದು ಹಂತ.

ನೂರಾರು ಭಾವದ ಬಾವಿ; ಎತ್ತಿಕೋ
ನಿನಗೆ ಬೇಕಾದಷ್ಟು ಸಿಹಿನೀರ.
ಪಾತ್ರೆಯಾಕಾರಗಳ ಕುರಿತು ಏತಕೆ ಜಗಳ?
ನಮಗೆ ಬೇಕಾದದ್ದು ದಾಹ ಪರಿಹಾರ.

ಪದ್ಯಗಳ ಅಕಾರಾದಿ

ಸಾಮಗಾನ

ಚೆಲುವು–ಒಲವು